**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

# ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ(ಎಸ್‌ಎಲ್‌ಬಿಸಿ) ಕರ್ನಾಟಕ

## 26.11.2024ರಂದು ಜರುಗಿದ 167ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಗಳು

## ಸ್ಥಳ

ಕೊಠಡಿ ಸಂಖ್ಯೆ 313, ವಿಧಾನಸೌಧ, ಬೆಂಗಳೂರು

**(ಹೈಬ್ರಿಡ್ ಮೋಡ್ ಮೂಲಕ)**

## ಸಂಯೋಜಕರು ಅಥವಾ ಸಂಚಾಲಕರು

ಪ್ರಧಾನ ಕಚೇರಿ: ಅನೆಕ್ಸ್, ಬೆಂಗಳೂರು

ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ
ಸಂಚಾಲಕರು: ಕೆನರಾ ಬ್ಯಾಂಕ್

---

**26.11.2024ರಂದು ಜರುಗಿದ 167ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಗಳು ಮತ್ತು 2024 ಸೆಪ್ಟೆಂಬರ್ 30ರ ವರೆಗೆ ಅನ್ವಯವಾಗುವಂತೆ ಬ್ಯಾಂಕಿಂಗ್ ಅಂಕಿಅಂಶಗಳು**

ಕರ್ನಾಟಕ ರಾಜ್ಯದ 167ನೇ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ(ಎಸ್‌ಎಲ್‌ಬಿಸಿ)ಯ ತ್ರೈಮಾಸಿಕ ಸಭೆಯು 26.11.2024ರಂದು ಮಧ್ಯಾಹ್ನ 03.30ಕ್ಕೆ ಕೊಠಡಿ ಸಂಖ್ಯೆ 313, ವಿಧಾನಸೌಧ, ಬೆಂಗಳೂರಿನಲ್ಲಿ ಜರುಗಿತು. ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರಾದ ಶ್ರೀಮತಿ ಉಮಾ ಮಹದೇವನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಪ್ರಾದೇಶಿಕ ನಿರ್ದೇಶಕರಾದ ಶ್ರೀಮತಿ ಸೋನಾಲಿ ಸೇನ್ ಗುಪ್ತಾ, ಕೆನರಾ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಹರ್ದೀಪ್ ಸಿಂಗ್ ಅಹ್ಲುವಾಲಿಯಾ, ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ (ವಿತ್ತೀಯ ಸುಧಾರಣೆ) ವಿಭಾಗದ ಕಾರ್ಯದರ್ಶಿ ಡಾ. ವಿಶಾಲ್ ಆರ್, ನಬಾರ್ಡ್ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆವಿಎಸ್‌ಎಸ್‌ಎಸ್‌ಎಲ್ ವಿ. ಪ್ರಸಾದರಾವ್, ಭಾರತೀಯ ರಿಸರ್ವ್ ಬ್ಯಾಂಕ್ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವಿ ಹರಿಪ್ರಸಾದ್, ಎಸ್‌ಎಲ್ ಬಿಸಿ ಕರ್ನಾಟಕದ ಸಂಚಾಲಕರು ಮತ್ತು ಕೆನರಾ ಬ್ಯಾಂಕ್ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಜೆ. ಶ್ರೀಕಾಂತ್, ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು ಮತ್ತು ನಿಗಮಗಳ ಪ್ರಧಾನ ಕಾರ್ಯದರ್ಶಿಗಳು, ಆಯುಕ್ತರು ಮತ್ತು ನಿರ್ದೇಶಕರು ಮತ್ತು ಆರ್‌ಬಿಐ, ನಬಾರ್ಡ್ ಮತ್ತು ವಿವಿಧ ಬ್ಯಾಂಕ್‌ಗಳ ಹಿರಿಯ ಅಧಿಕಾರಿಗಳು ವೀಡಿಯೊ ಕಾನ್ಫರೆನ್ಸ್ ಮೂಲಕ ಹಾಜರಿದ್ದರು.

ಎಸ್‌ಎಲ್‌ಬಿಸಿ ಕರ್ನಾಟಕದ ಸಂಚಾಲಕರು(ಸಂಯೋಜಕರು)ರಾದ ಶ್ರೀ. ಕೆ.ಜೆ. ಶ್ರೀಕಾಂತ್ ಅವರು ಸಭೆಯಲ್ಲಿ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರಾದ ಶ್ರೀಮತಿ ಉಮಾ ಮಹದೇವನ್, ಭಾರತೀಯ ರಿಸರ್ವ್ ಬ್ಯಾಂಕ್ ಪ್ರಾದೇಶಿಕ ನಿರ್ದೇಶಕರಾದ ಶ್ರೀಮತಿ ಸೋನಾಲಿ ಸೇನ್ ಗುಪ್ತಾ, ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ವಿತ್ತೀಯ ಸುಧಾರಣೆ ವಿಭಾಗದ ಕಾರ್ಯದರ್ಶಿ ಡಾ. ವಿಶಾಲ್ ಆರ್, ನಬಾರ್ಡ್ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆವಿಎಸ್‌ಎಸ್‌ಎಸ್‌ಎಲ್ ವಿ. ಪ್ರಸಾದರಾವ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವಿ ಹರಿಪ್ರಸಾದ್ ಅವರನ್ನು ಸ್ವಾಗತಿಸಿದರು.

**ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರು ಈ ಕೆಳಗಿನ ಯೋಜನೆಗಳ ಸ್ಥಿತಿಗತಿ ಕುರಿತು ಸಭೆಗೆ ವಿವರ ನೀಡಿದರು -**

1. ಕರ್ನಾಟಕವು ಮುದ್ರಾ ಯೋಜನೆಯಲ್ಲಿ 2ನೇ ಸ್ಥಾನದಲ್ಲಿದೆ, ಪಿಎಂ-ಸ್ವನಿಧಿ ಯೋಜನೆಯಲ್ಲಿ 4 ನೇ ಸ್ಥಾನ ಮತ್ತು ಪ್ರಧಾನ ಮಂತ್ರಿಗಳ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಔಪಚಾರಿಕೀಕರಣ(ಪಿಎಂಎಫ್‌ಎಂಇ) ಯೋಜನೆಯಲ್ಲಿ 7ನೇ ಸ್ಥಾನದಲ್ಲಿದೆ.

2. ಇದಲ್ಲದೆ, ಸರ್ಕಾರಿ ಪ್ರಾಯೋಜಿತ ಯೋಜನೆಗಳ ಅಡಿ ಪ್ರಕ್ರಿಯೆಗಳನ್ನು ಕಾರ್ಯರೂಪಕ್ಕೆ ಇಳಿಸಬೇಕು(ತ್ವರಿತಗೊಳಿಸಬೇಕು) ಎಂದು ಅವರು ಸಭೆಗೆ ಒತ್ತಿ ಹೇಳಿದರು.

3. ಕರ್ನಾಟಕ ರಾಜ್ಯವು ಮುಂಗಾರು ಋತುವಿನಲ್ಲಿ ಸರಾಸರಿಗಿಂತ ಹೆಚ್ಚಿನ ಮಳೆ ಪಡೆದಿದೆ, ಹಾಗಾಗಿ ಅರ್ಹ ಕೆಸಿಸಿ(ಕಿಸಾನ್ ಕ್ರೆಡಿಟ್ ಕಾರ್ಡ್) ಸಾಲ ಬಯಸುವ ರೈತರಿಗೆ ಹಣಕಾಸು ಒದಗಿಸುವಂತೆ ಅವರು ಬ್ಯಾಂಕರ್‌ಗಳಿಗೆ ವಿನಂತಿಸಿದರು.

4. ಜನಸುರಕ್ಷಾ ಯೋಜನೆಗಳ ವ್ಯಾಪ್ತಿಯನ್ನು ಹೆಚ್ಚಿಸಬೇಕೆಂದು ಅವರು ಸಭೆಗೆ ತಿಳಿಸಿದರು.

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

**ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಮಾತನಾಡಿ,**

1. ಪಿಎಂ ಸ್ವನಿಧಿ ಯೋಜನೆಯಡಿ ರಾಜ್ಯದ ಸ್ಥಿತಿಗತಿ ಸುಧಾರಣೆಗೆ ಶ್ರಮಿಸಿದ ಎಲ್ಲಾ ಬ್ಯಾಂಕರ್‌ಗಳನ್ನು ಅಭಿನಂದಿಸಿದರು.

2. ಪಂಚಾಯಿತಿ ಮಟ್ಟದಲ್ಲಿ ಬಹುದೊಡ್ಡ(ಬೃಹತ್) ಪರಿಪೂರ್ಣತೆ ಆಂದೋಲನ (ಅಭಿಯಾನ) ನಡೆಸಲು ಕರ್ನಾಟಕ ಸರ್ಕಾರದ ರಾಷ್ಟ್ರೀಯ ಜೀವನೋಪಾಯ ಮಿಷನ್ ಇಲಾಖೆ(ಎನ್‌ಎಲ್‌ಎಂ) ಮತ್ತು ಪಂಚಾಯತ್ ರಾಜ್ ಇಲಾಖೆಯು ಬ್ಯಾಂಕರ್‌ಗಳೊಂದಿಗೆ ಸಮನ್ವಯ ಸಾಧಿಸಲಿವೆ ಎಂದು ಅವರು ತಿಳಿಸಿದರು.

3. ಕರ್ನಾಟಕ ರಾಜ್ಯವು 40 ಲಕ್ಷ ಸ್ವಸಹಾಯ ಗುಂಪುಗಳ ಮಹಿಳೆಯರನ್ನು ಹೊಂದಿದ್ದು, ಅವರನ್ನು ಬ್ಯಾಂಕಿಂಗ್ ಪ್ರತಿನಿಧಿ(ಬಿಸಿ) ಸಖಿಗಳಾಗಿ ನೇಮಕ ಮಾಡಬಹುದು ಎಂದು ಅವರು ಮಾಹಿತಿ ನೀಡಿದರು, ಬ್ಯಾಂಕ್‌ಗಳು ಅವರನ್ನು ವ್ಯವಹಾರ ಪ್ರತಿನಿಧಿಗಳಾಗಿ ನೇಮಿಸಿದರೆ, ನಂತರ ಸರ್ಕಾರವು ಬಿಸಿ ಸಖಿಗಳಿಗೆ ದೈನಂದಿನ ಬ್ಯಾಂಕಿಂಗ್ ಕಾರ್ಯಾಚರಣೆಗಾಗಿ ಗ್ರಾಪಂ(ಪಂಚಾಯಿತಿ) ಕಚೇರಿ ಆವರಣದಲ್ಲಿ ಜಾಗ ನೀಡಲಿದೆ ಎಂದರು.

4. ರಾಷ್ಟ್ರೀಯ ಜೀವನೋಪಾಯ ಮಿಷನ್(ಎನ್‌ಎಲ್‌ಎಂ) ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಸೇರಿ ಕೆಲಸ ಮಾಡುವ ಎಸ್‌ಎಲ್‌ಬಿಸಿಯು ಪರಿಪೂರ್ಣತೆ ಅಭಿಯಾನದಲ್ಲಿ ಪಾಯಿಂಟ್ ಆಫ್ ಕಾಂಟ್ಯಾಕ್ಟ್(ಸಂಪರ್ಕ ಬಿಂದು) ಹೊಂದಿರಬೇಕು.

**ಆರ್‌ಬಿಐ ಪ್ರಾದೇಶಿಕ ನಿರ್ದೇಶಕರು ಮಾತನಾಡಿ,**

1. ಡಿಜಿಟಲ್ ಪಾವತಿ ಪರಿಸರ ವ್ಯವಸ್ಥೆಯ ವಿಸ್ತರಣೆ ಮತ್ತು ಆಳಗೊಳಿಸುವ(ಇಡಿಡಿಪಿಇ) ಯೋಜನೆಯಲ್ಲಿ 100% ಡಿಜಿಟಲೀಕರಣ ಗುರಿ ಸಾಧಿಸಿರುವ ಎಲ್ಲಾ ಬ್ಯಾಂಕರ್‌ಗಳನ್ನು ಅಭಿನಂದಿಸಿದರು.

2. ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ(ಪಿಎಲ್‌ಪಿ) ಮತ್ತು ವಾರ್ಷಿಕ ಸಾಲ ಯೋಜನೆ(ಎಸಿಪಿ)ಯನ್ನು ಸೇರಿಸಬೇಕು ಎಂದು ಅವರು ಸೂಚನೆ ನೀಡಿದರು.

3. ಆರ್ ಬಿಐ ಗುರುತಿಸಿದಂತೆ, ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ ಶ್ರೇಣಿ 5ರ 47 ಗ್ರಾಮೀಣ ಕೇಂದ್ರಗಳಿವೆ ಎಂದು ಅವರು ಎಸ್‌ಎಲ್‌ಬಿಸಿಗೆ ಮಾಹಿತಿ ನೀಡಿದರು. ಸಿಐಎಸ್‌ಬಿಐ ಪೋರ್ಟಲ್‌ನಲ್ಲಿ ಅವುಗಳ ವಿವರಗಳನ್ನು ಪರಿಶೀಲಿಸುವಂತೆ ಮತ್ತು ನವೀಕರಿಸು(ಪರಿಷ್ಕರಿಸು)ವಂತೆ ಸದಸ್ಯ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಬೇಕು ಎಂದು ಎಸ್‌ಎಲ್‌ಬಿಸಿಗೆ ಸೂಚಿಸಲಾಗಿದೆ. ಇದಲ್ಲದೆ, ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳನ್ನು ಅನುಸರಿಸಲು ಮತ್ತು ಯಾವುದೇ ಬ್ಯಾಂಕಿಂಗ್ ಶಾಖೆ ಇಲ್ಲದ ಕೇಂದ್ರಗಳನ್ನು ಗುರುತಿಸಿ, ಕ್ರಿಯಾಯೋಜನೆ ರೂಪಿಸುವಂತೆ ಅವರು, ಎಲ್ಲಾ ಬ್ಯಾಂಕುಗಳಿಗೆ ಸಲಹೆ ನೀಡಿದರು.

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

**ನಬಾರ್ಡ್ ಮುಖ್ಯ ಪ್ರಧಾನ ವ್ಯವಸ್ಥಾಪಕರು ಮಾತನಾಡಿ**,

1. ಎಲ್ಲಾ ಜಿಲ್ಲೆಗಳಲ್ಲಿ ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ(Potential Linked Credit Plan-ಪಿಎಲ್‌ಪಿ)ಯ ಪೂರ್ವಭಾವಿ ಸಭೆಗಳನ್ನು ನಡೆಸಲಾಗಿದೆ, ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ(ಪಿಎಲ್‌ಪಿ)ಯನ್ನು ಶೀಘ್ರ ಅಂತಿಮಗೊಳಿಸಲಾಗುವುದು.

2. ಜಂಟಿ ಹೊಣೆಗಾರಿಕೆ ಗುಂಪು(ಜೆಎಲ್ ಜಿ) ಬ್ಯಾಂಕ್ ವಾರು ಮತ್ತು ಜಿಲ್ಲಾವಾರು ಗುರಿಗಳನ್ನು ಹೊಂದಿರಬೇಕು ಮತ್ತು ಅವುಗಳನ್ನು ಎಸ್‌ಎಲ್‌ಬಿಸಿ ಸಭೆಗಳಲ್ಲಿ ಪರಿಶೀಲಿಸಬೇಕು.

3. ನಬಾರ್ಡ್‌ನ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರನ್ನು ಎಸ್‌ಎಲ್‌ಬಿಸಿ ಸಭೆಗಳಿಗೆ ವೀಡಿಯೊ ಕಾನ್ಫರೆನ್ಸ್ ಮೂಲಕ ಆಹ್ವಾನಿಸಬೇಕು ಎಂದು ಅವರು ಸೂಚಿಸಿದರು.

**ಕಾರ್ಯಸೂಚಿ ವಿಷಯಗಳ ಚರ್ಚೆ**

ಎಸ್‌ಎಲ್‌ಬಿಸಿ ಕರ್ನಾಟಕ ಉಪಸಂಚಾಲಕರಾದ ಶ್ರೀ ಎಂ ಭಾಸ್ಕರ ಚಕ್ರವರ್ತಿ ಅವರು ಸಭೆಗೆ ಮಾಹಿತಿ ನೀಡಿ, ಕಾರ್ಯಸೂಚಿ ಕಡತಗಳನ್ನು ಪ್ರತಿನಿಧಿಗಳ ಮುಂದೆ ಇಡಲಾಗಿದೆ. ವಿಷಯವಾರು ಕಾರ್ಯಸೂಚಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗುತ್ತಿದೆ. ಸಭೆಯ ನಡಾವಳಿಗಳನ್ನು ದಾಖಲಾತಿಗಾಗಿ ಮತ್ತು ಪಾಲುದಾರರ ಮುಂದಿನ ಅಗತ್ಯ ಕ್ರಮಗಳಿಗಾಗಿ ಇಲ್ಲಿ ಇರಿಸಲಾಗಿದೆ ಎಂದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 1**

**1.1 15.08.2024ರಂದು ಜರುಗಿದ 166ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಗಳ ದೃಢೀಕರಣ:**

14.08.2024ರಂದು ಜರುಗಿದ 166ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಯನ್ನು ಎಲ್ಲಾ ಸದಸ್ಯ ಬ್ಯಾಂಕ್‌ಗಳು ಮತ್ತು ಸರ್ಕಾರದ ಇಲಾಖೆಗಳಿಗೆ ವಿತರಿಸಲಾಯಿತು. ಈ ನಡಾವಳಿಗಳ ಬಗ್ಗೆ ಯಾವುದೇ ಸಲಹೆಗಳು ಬಂದಿಲ್ಲ. ಹಾಗಾಗಿ, ಸಭೆಯು ನಡಾವಳಿಗಳನ್ನು ದೃಢೀಕರಿಸಿದೆ.

**1.2 ಹಿಂದಿನ ಎಸ್‌ಎಲ್‌ಬಿಸಿ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳ ಅನುಸರಣಾ ಕ್ರಮ:**

ಡಿಸಿಬಿ ಬ್ಯಾಂಕ್, ಫೆಡರಲ್ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್ ಮತ್ತು ಫಿನೋ ಪೇಮೆಂಟ್ಸ್ ಬ್ಯಾಂಕ್‌ಗಳು ಎಸ್‌ಎಲ್‌ಬಿಸಿ ರಿವಾಂಪ್ ಪೋರ್ಟಲ್‌ನಲ್ಲಿ ದತ್ತಾಂಶ ಅಪ್‌ಲೋಡ್ ಮಾಡಲು ವಿಳಂಬ ಮಾಡಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

ಎಲ್ಲಾ ಸದಸ್ಯ ಬ್ಯಾಂಕ್‌ಗಳು ನಿಗದಿತ ಸಮಯದ ಚೌಕಟ್ಟಿನೊಳಗೆ ದತ್ತಾಂಶ ಅಪ್‌ಲೋಡ್ ಮಾಡಬೇಕು, ಯಾವುದೇ ಕರ್ತವ್ಯ ಲೋಪಗಳಿದ್ದರೆ ಅದನ್ನು ತಮ್ಮ ಮುಖ್ಯ ಕಚೇರಿಗೆ ತಿಳಿಸಬೇಕೆಂದು ಮುಖ್ಯಸ್ಥರು(ಅಧ್ಯಕ್ಷರು) ಸಲಹೆ ನೀಡಿದರು.

**1.3 ಸದಸ್ಯ ಬ್ಯಾಂಕ್‌ಗಳು ನಿಯಂತ್ರಕ ಸಂಸ್ಥೆಗಳ ಮುಂದೆ ಸಲ್ಲಿಸಬೇಕಾದ ದತ್ತಾಂಶ ವಿಳಂಬ/ಸಲ್ಲಿಕೆ ಆಗದಿರುವುದು:**

ಬ್ಯಾಂಕ್ ಆಫ್ ಬರೋಡಾ ಮತ್ತು ಡಿಸಿಬಿ ಬ್ಯಾಂಕ್‌ಗಳು ಪ್ರಗತಿ ಅಂಕಿಅಂಶಗಳನ್ನು ಸಲ್ಲಿಸಲು ವಿಳಂಬ ಮಾಡಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಬ್ಯಾಂಕ್ ಆಫ್ ಬರೋಡಾ ಮತ್ತು ಡಿಸಿಬಿ ಬ್ಯಾಂಕ್‌ಗೆ ಕಾಲಮಿತಿಯೊಳಗೆ ಮಾಹಿತಿ ಸಲ್ಲಿಕೆಗೆ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.

ನಿಯಂತ್ರಕರು ಅಥವಾ ನಿಯಂತ್ರಕ ಸಂಸ್ಥೆಗಳು ಕೋರಿದ ದತ್ತಾಂಶವನ್ನು ವಿಳಂಬ ಮಾಡಬಾರದು ಎಂದು ಅವರು ತಿಳಿಸಿದರು.

ಪಂಚಾಯತ್‌ರಾಜ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಎಸ್‌ಎಲ್‌ಬಿಸಿಯು ಬಿಸಿ(ಬಿಸಿನೆಸ್ ಕರೆಸ್ಪಾಂಡೆಂಟ್) ದತ್ತಾಂಶವನ್ನು ಪಂಚಾಯತ್‌ರಾಜ್ ಗೆ ನೀಡಬೇಕು.

5 ದಿನಗಳಿಗಿಂತ ಹೆಚ್ಚಿನ ವಿಳಂಬ ಮಾಡುವ ತಪ್ಪಿತಸ್ಥ ಬ್ಯಾಂಕ್‌ಗಳಿಗೆ ದಂಡ ವಿಧಿಸಬೇಕು ಎಂದು ಕೆನರಾ ಬ್ಯಾಂಕ್ ಕಾರ್ಯಕಾರಿ ನಿರ್ದೇಶಕರು ಸೂಚಿಸಿದರು.

**(ಕ್ರಮ: ಎಸ್‌ಎಲ್‌ಬಿಸಿ, ಬ್ಯಾಂಕ್ ಆಫ್ ಬರೋಡಾ, ಇಂಡಸ್‌ಇಂಡ್ ಬ್ಯಾಂಕ್, ಫೆಡರಲ್ ಬ್ಯಾಂಕ್, ಡಿಸಿಬಿ ಬ್ಯಾಂಕ್ ಮತ್ತು ಫಿನೋ ಪೇಮೆಂಟ್ಸ್ ಬ್ಯಾಂಕ್)**

**ಕಾರ್ಯಸೂಚಿ ವಿಷಯ ಸಂಖ್ಯೆ – 2**

**2.1 2024 ಸೆಪ್ಟೆಂಬರ್ 30ಕ್ಕೆ ಅನ್ವಯವಾಗುವಂತೆ ಬ್ಯಾಂಕಿಂಗ್ ಅಂಕಿಅಂಶ**

2024 ಸೆಪ್ಟೆಂಬರ್ ತನಕ ಅನ್ವಯವಾಗುವಂತೆ, ಕರ್ನಾಟಕ ರಾಜ್ಯದಲ್ಲಿ ಠೇವಣಿ, ಮುಂಗಡಗಳು(ಸಾಲ), ಸಾಲ-ಠೇವಣಿ(ಸಿಡಿ) ಅನುಪಾತ, ಎಂಎಸ್‌ಎಂಇ, ಕೃಷಿ ಮತ್ತು ದುರ್ಬಲ ವರ್ಗಗಳಿಗೆ ಒಟ್ಟು ಆದ್ಯತಾ ವಲಯದ ಮುಂಗಡ(ಪಿಎಸ್‌ಎ), ಮುಂಗಡಗಳ ಬ್ಯಾಂಕಿಂಗ್ ಅಂಕಿಅಂಶಗಳನ್ನು ಸಂಚಾಲಕರು ಪ್ರಸ್ತುತಪಡಿಸಿದರು.

ಠೇವಣಿಗಳಲ್ಲಿ ವಾರ್ಷಿಕ 10% ಮತ್ತು ಮುಂಗಡಗಳಲ್ಲಿ 13% ವಾರ್ಷಿಕ ಬೆಳವಣಿಗೆ ದಾಖಲಾಗಿದೆ. 30.09.2024ರ ವರೆಗೆ ಅನ್ವಯವಾಗುವಂತೆ, ರಾಜ್ಯದ ಸಿಡಿ ಅನುಪಾತ 80% ಇದೆ.

2023 ಸೆಪ್ಟೆಂಬರ್ ತನಕ ಆದ್ಯತಾ ವಲಯದ ಸಾಲ ನೀಡಿಕೆಯು 50,750 ಕೋಟಿ ರೂ.ಗೆ ಏರಿಕೆ ಕಂಡಿದ್ದು, ವಾರ್ಷಿಕ ಆಧಾರದಲ್ಲಿ 12% ಸಂಪೂರ್ಣ ಶೇಕಡಾವಾರು ಬೆಳವಣಿಗೆ ದಾಖಲಿಸಿದೆ.

ಕೃಷಿ ಸಾಲ ನೀಡಿಕೆಯು 2023 ಸೆಪ್ಟೆಂಬರ್ ವರೆಗೆ ಇದ್ದ 2,03,317 ಕೋಟಿ ರೂ.ನಿಂದ 2024 ಸೆಪ್ಟೆಂಬರ್ ಹೊತ್ತಿಗೆ 2,30,720 ಕೋಟಿ ರೂ.ಗೆ ಏರಿಕೆ ಕಂಡಿದ್ದು, ಒಂದೇ ವರ್ಷದ ಅವಧಿಯಲ್ಲಿ 27,403 ಕೋಟಿ ರೂ.ಗೆ ಹೆಚ್ಚಳವಾಗಿದೆ, ವಾರ್ಷಿಕ ಆಧಾರದಲ್ಲಿ 13% ಪ್ರಗತಿ ದಾಖಲಿಸಿದೆ.

ಅದೇ ರೀತಿ, ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ(ಎಂಎಸ್‌ಎಂಇ) ವಲಯಕ್ಕೆ 2023 ಸೆಪ್ಟೆಂಬರ್ ತನಕ ನೀಡಲಾದ ಸಾಲ ಪ್ರಮಾಣ 1,55,706 ಕೋಟಿ ರೂ.ನಿಂದ 2024 ಸೆಪ್ಟೆಂಬರ್ ತನಕ 1,80,624 ಕೋಟಿ ರೂ.ಗೆ ಏರಿಕೆ ಕಂಡಿದೆ. ಅಂದರೆ ಒಂದೇ ವರ್ಷದಲ್ಲಿ ಸಾಲ ನೀಡಿಕೆಯ ಸಂಪೂರ್ಣ ಆದಾಯ ಬೆಳವಣಿಗೆ 24,918 ಕೋಟಿ ರೂ. ಹೆಚ್ಚಳವಾಗಿದೆ, ವಾರ್ಷಿಕ ಆಧಾರದಲ್ಲಿ 16% ಪ್ರಗತಿ ದಾಖಲಾಗಿದೆ.

ಕರ್ನಾಟಕ ಸರ್ಕಾರದ ಕಾರ್ಯದರ್ಶಿ ಡಾ. ಆರ್. ವಿಶಾಲ್ ಮಾತನಾಡಿ, ಒಟ್ಟು ಸಾಲ ನೀಡಿಕೆಯ ಪೈಕಿ, ಆದ್ಯತಾ ವಲಯಕ್ಕೆ ನೀಡಿರುವ ಸಾಲ ಪ್ರಮಾಣದಲ್ಲಿ ವಾರ್ಷಿಕ ಆಧಾರದಲ್ಲಿ 5% ಕಡಿಮೆಯಾಗಿದೆ. ಆದ್ಯತಾ ವಲಯದ ಮುಂಗಡ(ಪಿಎಸ್‌ಎ)ಗಳಿಗೆ ಸಂಬಂಧಿಸಿದಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರಾಜ್ಯದಲ್ಲಿ ಕಳಪೆ ಸಾಧನೆ ಮಾಡುತ್ತಿದೆ. ಎಸ್ ಬಿಐ ಆಡಳಿತ ಮಂಡಳಿಗೆ ಈ ಸಮಸ್ಯೆಯನ್ನು ಗಮನಕ್ಕೆ ತರಲಾಗಿದೆ. ಅಲ್ಲದೆ, ಆದ್ಯತಾ ವಲಯಕ್ಕೆ ನೀಡಲಾಗುತ್ತಿರುವ ಮುಂಗಡಗಳಲ್ಲಿ ಸುಧಾರಣೆ ಕಂಡುಬರುತ್ತಿಲ್ಲ ಎಂದರು.

ಇದಲ್ಲದೆ, ರಾಜ್ಯದ ಪ್ರಮುಖ ಖಾಸಗಿ ಬ್ಯಾಂಕ್‌ಗಳು ಅಂದರೆ ಎಚ್‌ಡಿಎಫ್‌ಸಿ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್ ಒಟ್ಟು ಮುಂಗಡಗಳ ಪೈಕಿ ಕೃಷಿ ವಲಯಕ್ಕೆ ನೀಡಬೇಕಾದ ಸಾಲಗಳ ಗುರಿ ಸಾಧನೆಯ ಮಟ್ಟದಲ್ಲಿಲ್ಲ ಎಂದು ಅವರು ತಿಳಿಸಿದರು.

ಎಸ್‌ಬಿಐ ಅಧಿಕಾರಿಗಳು ಮಾತನಾಡಿ, ಸಾಲ ನೀಡಿಕೆಯ ಪರಿಸ್ಥಿತಿಯ ಬಗ್ಗೆ ಅರಿವಿದೆ, ಕೃಷಿ ವಲಯಕ್ಕೆ ನೀಡಬೇಕಾದ ಸಾಲದ ಕಡ್ಡಾಯ ಗುರಿಗಳನ್ನು ಸಾಧಿಸಲು ಎಲ್ಲಾ ಕ್ಷೇತ್ರ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಎಸ್‌ಬಿಐ, ಎಚ್‌ಡಿಎಫ್‌ಸಿ, ಐಸಿಐಸಿಐ ಮತ್ತು ಎಕ್ಸಿಸ್ ಬ್ಯಾಂಕ್‌ನೊಂದಿಗೆ ಪ್ರತ್ಯೇಕ ಸಭೆ ನಡೆಸುವಂತೆ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ಹಣಕಾಸು ಇಲಾಖೆ. ಹಣಕಾಸು ಸುಧಾರಣೆ ವಿಭಾಗದ ಕಾರ್ಯದರ್ಶಿ ಅವರಿಗೆ ಮನವಿ ಮಾಡಿದರು. ಈ ಬ್ಯಾಂಕ್‌ಗಳು ಪಿಎಸ್‌ಎ ಅಡಿ, ಕಡ್ಡಾಯ ಗುರಿಗಳು ಮತ್ತು ಉಪಗುರಿಗಳನ್ನು ಸಾಧಿಸಲು ಕ್ರಿಯಾಯೋಜನೆ ರೂಪಿಸಬೇಕು ಎಂದು ಅವರು ಸೂಚಿಸಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 3**

### 3.1 ವಾರ್ಷಿಕ ಸಾಲ ಯೋಜನೆ ಮತ್ತು ಆದ್ಯತಾ ವಲಯದ ಮುಂಗಡಗಳ ಸಾಧನೆ

2024-25ರ ಸಾಲಿನ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಸಾಲ ನೀಡಿಕೆ(ವಿತರಣೆ)ಯ ತುಲನಾತ್ಮಕ ವಿಶ್ಲೇಷಣೆಯನ್ನು ಉಪ ಸಂಚಾಲಕರು ಪ್ರಸ್ತುತಪಡಿಸಿದರು.

- 30.09.2024ರ ವರೆಗೆ ಅನ್ವಯವಾಗುವಂತೆ, ಬ್ಯಾಂಕುಗಳು ಅಲ್ಪಾವಧಿ ಕೃಷಿ ಸಾಲಗಳ ಅಡಿ, 62, 890ಕೋಟಿ ರೂ. ಸಾಲ ವಿತರಿಸಿವೆ. ವಾರ್ಷಿಕ ಗುರಿಗೆ ಪ್ರತಿಯಾಗಿ 55% ಸಾಧನೆ ಮಾಡಿವೆ.
- 2024ಸೆಪ್ಟೆಂಬರ್ ವರೆಗೆ ಅನ್ವಯವಾಗುವಂತೆ, ಬ್ಯಾಂಕುಗಳು ಕೃಷಿ ಅವಧಿ ಸಾಲಗಳ ಅಡಿ, 41, 629ಕೋಟಿ ರೂ .ಸಾಲ ನೀಡಿದ್ದು, ವಾರ್ಷಿಕ ಗುರಿಗೆ ಪ್ರತಿಯಾಗಿ 54% ಸಾಧನೆ ಮಾಡಿವೆ.
- 30.09.2024ರ ವರೆಗೆ ಅನ್ವಯವಾಗುವಂತೆ, ಒಟ್ಟು ಕೃಷಿ ಸಾಲ ನೀಡಿಕೆಯಲ್ಲಿ ವಾರ್ಷಿಕ ಗುರಿಗೆ ಪ್ರತಿಯಾಗಿ 54% ಸಾಧನೆ ದಾಖಲಿಸಿವೆ.
- 30.09.2024ರ ವರೆಗೆ ಅನ್ವಯವಾಗುವಂತೆ, ಬ್ಯಾಂಕುಗಳು ಎಂಎಸ್‌ಎಂಇ ವಲಯಕ್ಕೆ 1,07,ಕೋಟಿ 921 ರೂ. ಸಾಲ ವಿತರಿಸಿದ್ದು, ವಾರ್ಷಿಕ ಗುರಿಗೆ ಪ್ರತಿಯಾಗಿ 62% ಸಾಧನೆ ಮಾಡಿವೆ.
- 30.09.2024ರ ವರೆಗೆ ಅನ್ವಯವಾಗುವಂತೆ, ಬ್ಯಾಂಕುಗಳು ಒಟ್ಟು ಆದ್ಯತಾ ವಲಯದ ಮುಂಗಡಗಳ ಅಡಿ2 ,21,ಕೋಟಿ 662 ರೂ. ಸಾಲ ಒದಗಿಸಿದ್ದು, ವಾರ್ಷಿಕ ಗುರಿಗೆ ಪ್ರತಿಯಾಗಿ 57% ಸಾಧನೆ ದಾಖಲಿಸಿವೆ.

ಕಳೆದ ವರ್ಷಕ್ಕೆ ಹೋಲಿಸಿದರೆ, ಎಂಎಸ್‌ಎಂಇ ವಲಯಕ್ಕೆ ಈ ವರ್ಷ ನೀಡಿರುವ ಸಾಲದ ಪ್ರಮಾಣದಲ್ಲಿ 7% ಕಡಿಮೆ ಸಾಧನೆಯಾಗಿದೆ ಎಂದು ಹಣಕಾಸು ಸಚಿವಾಲಯದ ಕಾರ್ಯದರ್ಶಿ ಸಭೆಯ ಗಮನಕ್ಕೆ ತಂದರು.

ಇದಕ್ಕೆ ಉತ್ತರಿಸಿದ ಎಸ್‌ಎಲ್‌ಬಿಸಿ ಸಂಚಾಲಕರು, ಈ ಬಾರಿ ಸಾಲ ವಿತರಣೆ ಗುರಿಯ ಗಾತ್ರ ಹೆಚ್ಚಳವಾಗಿದೆ. ಇದಲ್ಲದೆ, ಕೇಂದ್ರ ಸರ್ಕಾರದ ಹಣಕಾಸು ಸಚಿವರು ಕರ್ನಾಟಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, 2024-25ನೇ ಸಾಲಿಗೆ 1,54,000 ಕೋಟಿ ರೂ. ಹೆಚ್ಚುವರಿ ಸಾಲ ವಿತರಣೆ ಗುರಿ ನೀಡಿದ್ದಾರೆ. ಅದರಂತೆ, ಎಂಎಸ್‌ಎಂಇ ವಲಯಕ್ಕೆ ಮತ್ತಷ್ಟು ಸಾಲದ ಹರಿವು ಹೆಚ್ಚಿಸಲು ರಾಜ್ಯವಾರು ಮತ್ತು ಬ್ಯಾಂಕ್ ವಾರು ಗುರಿ ನಿಗದಿಪಡಿಸಲಾಗುವುದು ಎಂದು ತಿಳಿಸಿದರು.

ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಮಾತನಾಡಿ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ, ಸಾಮಾಜಿಕ ಮೂಲಸೌಕರ್ಯ ವಲಯಕ್ಕೆ ನೀಡಿರುವ ಸಾಲ ನೀಡಿಕೆ ಗುರಿ ಇಳಿಕೆಯಾಗಿದೆ, ಇದು ಕಳವಳಕಾರಿ ವಿಷಯವಾಗಿದೆ ಎಂದರು.

**(ಕ್ರಮ: ಎಲ್ಲಾ ಬ್ಯಾಂಕ್‌ಗಳು ಮತ್ತು ಎಸ್‌ಎಲ್‌ಬಿಸಿ)**

**3.2 2024 ಮಾರ್ಚ್ ವರೆಗೆ ಅನ್ವಯವಾಗುವಂತೆ, ವಾರ್ಷಿಕ ಸಾಲ ಯೋಜನೆಯ ಪ್ರಮುಖ ಬ್ಯಾಂಕ್ ವಾರು ಕಾರ್ಯಕ್ಷಮತೆ/ಸಾಧನೆ:**

30.09.2024ರ ವರೆಗೆ ಅನ್ವಯವಾಗುವಂತೆ, ವಾರ್ಷಕ ಸಾಲ ಯೋಜನೆ ಅಡಿ, ಎಲ್ಲಾ ಬ್ಯಾಂಕ್‌ಗಳ ಕಾರ್ಯಕ್ಷಮತೆಯನ್ನು ಸಭೆ ಗಮನಿಸಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಇಂಡಿಯಾ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಜತೆಗೆ, ಎಚ್‌ಡಿಎಫ್‌ಸಿ, ಐಸಿಐಸಿಐನಂತಹ ಎಲ್ಲಾ ಪ್ರಮುಖ ಖಾಸಗಿ ವಲಯದ ಬ್ಯಾಂಕ್‌ಗಳು ಆದ್ಯತಾ ವಲಯ ಮತ್ತು ಕೃಷಿ ವಲಯದ ಕಡ್ಡಾಯ ಗುರಿ ಕ್ರಮವಾಗಿ 40% ಮತ್ತು 18% ಗುರಿ ಸಾಧಿಸುವಲ್ಲಿ ಹಿಂದುಳಿದಿವೆ ಎಂದು ಉಪ ಸಂಚಾಲಕರು ಮಾಹಿತಿ ನೀಡಿದರು.

ಬ್ಯಾಂಕ್‌ಗಳು ವಿಶೇಷವಾಗಿ ಎಸ್‌ಬಿಐ, ಪಿಎನ್‌ಬಿ, ಬಿಒಬಿ, ಎಚ್‌ಡಿಎಫ್‌ಸಿ ಇತ್ಯಾದಿಗಳಿಗೆ ಆದ್ಯತಾ ವಲಯ ಮತ್ತು ಕೃಷಿ ಸಾಲದ ಅಡಿ, ನೀಡಲಾಗಿರುವ ಆರ್‌ಬಿಐನ ಕಡ್ಡಾಯ ಗುರಿಗಳನ್ನು ಸಾಧಿಸಲು ಕೆಲಸ ಮಾಡುವಂತೆ ಅಧ್ಯಕ್ಷರು ಸಲಹೆ ನೀಡಿದರು.

**(ಕ್ರಮ: ಎಸ್‌ಬಿಐ, ಬಿಒಐ, ಬಿಒಎಂ, ಸೆಂಟ್ರಲ್ ಬ್ಯಾಂಕ್, ಪಿಎಸ್ ಬಿ, ಎಚ್‌ಡಿಎಫ್‌ಸಿ ಎಕ್ಸಿಸ್ ಬ್ಯಾಂಕ್ ಮತ್ತು ಪಿಎನ್‌ಬಿ)**

**ಕಾರ್ಯಸೂಚಿ ವಿಷಯ ಸಂಖ್ಯೆ – 4**

**4. ಜಿಲ್ಲಾವಾರು ವಾರ್ಷಿಕ ಸಾಲ ಯೋಜನೆಯ ಕಾರ್ಯಕ್ಷಮತೆ**

2024-25ರ ಸಾಲಿನ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವಾರ್ಷಿಕ ಸಾಲ ಯೋಜನೆಯ ಅಡಿ, ಕೋಲಾರ(63%), ಬೆಂಗಳೂರು ಗ್ರಾಮಾಂತರ(62%), ತುಮಕೂರು(60%), ಹಾವೇರಿ(62%) ಮತ್ತು ಬಳ್ಳಾರಿ(53%) ಮೊದಲ 5 ಜಿಲ್ಲೆಗಳಾಗಿ ಉನ್ನತ ಸಾಧನೆ ಮಾಡಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

ಅದಲ್ಲದೆ, 2024-25ರ ಆರ್ಥಿಕ ಸಾಲಿನಲ್ಲಿ ವಾರ್ಷಿಕ ಸಾಲ ಯೋಜನೆ ಅಡಿ, ಉಡುಪಿ (60%) ಬಾಗಲಕೋಟೆ (53%), ದಕ್ಷಿಣ ಕನ್ನಡ (53%) ಚಾಮರಾಜನಗರ (50%) ಮತ್ತು ಕೊಪ್ಪಳ (48%) ಸಾಧನೆ ಮಾಡಿದ 5 ಜಿಲ್ಲೆಗಳಾಗಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಆಗ ಹಣಕಾಸು ಇಲಾಖೆಯ ಕಾರ್ಯದರ್ಶಿ ಮಾತನಾಡಿ, ಈ ಮೇಲಿನ ಜಿಲ್ಲೆಗಳು ವರ್ಷಿಕ ಸಾಲ ಯೋಜನೆಯ ಗುರಿ ಸಾಧಿಸದಿರಲು ಇರುವ ಮೂಲ ಕಾರಣ ವಿಶ್ಲೇಷಿಸುವಂತೆ ಲೀಡ್ ಜಿಲ್ಲಾ ವ್ಯವಸ್ಥಾಪಕರಿಗೆ ಸೂಚಿಸಿದರು. ಈ ಗುರಿಗಳನ್ನು ಸಾಧಿಸಲು ಅಗತ್ಯವಾದ ಕಾರ್ಯತಂತ್ರಗಳ ಕುರಿತು ಮುಂಬರುವ ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ ಮತ್ತು ಜಿಲ್ಲಾ ಲೀಡ್ ಪರಾಮರ್ಶೆ ಸಮಿತಿ ಸಭೆಯಲ್ಲಿ ಚರ್ಚಿಸಬೇಕು ಎಂದು ಅವರು ಸೂಚಿಸಿದರು.

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**

**ಸಂಚಾಲಕರು: ಕೆನರಾ ಬ್ಯಾಂಕ್**

---

**(ಕ್ರಮ: ಕೊಪ್ಪಳ, ಚಾಮರಾಜನಗರ ಮತ್ತು ಬಾಗಲಕೋಟೆಯ ಲೀಡ್ ಜಿಲ್ಲಾ ವ್ಯವಸ್ಥಾಪಕರು-ಎಲ್‌ಡಿಎಂಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 5**

**60%ಗಿಂತ ಕಡಿಮೆ ಸಿಡಿ(ಸಾಲ-ಠೇವಣಿ) ಅನುಪಾತ ಹೊಂದಿರುವ ಜಿಲ್ಲೆಗಳ ಪರಾಮರ್ಶೆ ಮತ್ತು ಜಿಲ್ಲಾ ಸಲಹಾ ಸಮಿತಿ(ಡಿಸಿಸಿ)ಯ ವಿಶೇಷ ಉಪಸಮಿತಿಗಳ ಕಾರ್ಯ:**

30.09.2024ರ ವರೆಗೆ ಅನ್ವಯವಾಗುವಂತೆ, ರಾಜ್ಯದ ಸಿಡಿ ಅನುಪಾತವು 79.97% ಇದ್ದು, ಉತ್ತರ ಕನ್ನಡ ಮತ್ತು ಉಡುಪಿ ಕ್ರಮವಾಗಿ 46% ಮತ್ತು 48% ಸಿಡಿ ಅನುಪಾತ ಹೊಂದಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಅದಕ್ಕೆ ಆರ್‌ಬಿಐ ಪ್ರಾದೇಶಿಕ ನಿರ್ದೇಶಕರು, ಈ ಜಿಲ್ಲೆಗಳ ಸಿಡಿ ಅನುಪಾತ 40%ಗಿಂತ ಕಡಿಮೆ ಇರಬಾರದು ಎಂದು ಸೂಚಿಸಿದರು.

**5.1 2024 ಸೆಪ್ಟೆಂಬರ್ ವರೆಗೆ ಅನ್ವಯವಾಗುವಂತೆ, 60%ಗಿಂತ ಕಡಿಮೆ ಸಿಡಿ ಅನುಪಾತ ಹೊಂದಿರುವ ಜಿಲ್ಲೆಗಳು**

ಕಡಿಮೆ ಸಿಡಿ ಅನುಪಾತದ ಕಾರಣಗಳನ್ನು ಇಬ್ಬರು ಲೀಡ್ ಜಿಲ್ಲಾ ವ್ಯವಸ್ಥಾಪಕರು ವಿವರ ನೀಡಿದರು, ಆ ಕಾರಣಗಳು ಈ ಕೆಳಗಿನಂತಿವೆ

1. ಕೈಗಾರಿಕಾ ಚಟುವಟಿಕೆಗಳ ಸೀಮಿತ ವ್ಯಾಪ್ತಿ-ಕರಾವಳಿ ನಿಯಂತ್ರಣ ವಲಯ(ಸಿಆರ್ ಝಡ್)ದ ನಿರ್ಬಂಧಗಳು ಮತ್ತು ಅರಣ್ಯ ಪ್ರದೇಶದ ನಿರ್ಬಂಧಗಳು ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಅಡ್ಡಿಯಾಗುತ್ತಿವೆ

2. ಎರಡೂ ಜಿಲ್ಲೆಗಳ ಒಟ್ಟು ಭೌಗೋಳಿಕ ಪ್ರದೇಶದ ಪೈಕಿ ಸುಮಾರು 40% ಪ್ರದೇಶವು ಅರಣ್ಯದಿಂದ ಆವೃತವಾಗಿದೆ, 15% ಪ್ರದೇಶವು ಬಂಜರು ಅಥವಾ ಕೃಷಿಗೆ ಲಭ್ಯವಿಲ್ಲ. ಇದು ಕಡಿಮೆ ಸಿಡಿ ಅನುಪಾತಕ್ಕೆ ಪ್ರಮುಖ ಕಾರಣವಾಗಿದೆ.

**(ಕ್ರಮ: ಉತ್ತರ ಕನ್ನಡ, ಉಡುಪಿ ಎಲ್‌ಡಿಎಂಗಳು ಮತ್ತು ಡಿಸಿಗಳು ಮತ್ತು ಎಲ್ಲಾ ಸದಸ್ಯ ಬ್ಯಾಂಕ್‌ಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 6**

**ವಾರ್ಷಿಕ ಸಾಲ ಯೋಜನೆ(ಎಸಿಪಿ) ಗುರಿ ನಿಗದಿಗೆ ಸಮಿತಿ ರಚನೆ:**

ಎಸಿಪಿ ಗುರಿ ನಿಗದಿಪಡಿಸಲು ಆರ್‌ಬಿಐ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಬೇಕು. ಈ ಸಮಿತಿಗೆ ನಬಾರ್ಡ್, ರಾಜ್ಯ ಸರ್ಕಾರ, ಪ್ರಮುಖ ಬ್ಯಾಂಕ್‌ಗಳು ಮತ್ತು ಎಸ್‌ಎಲ್‌ಬಿಸಿ ಸಮಿತಿಯ ಸದಸ್ಯರಾಗಿರಬೇಕು ಎಂದು ಕಳೆದ ಎಸ್‌ಎಲ್‌ಬಿಸಿ ಸಭೆಯಲ್ಲಿ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಕಾರ್ಯದರ್ಶಿ ಸಲಹೆ ನೀಡಿದ್ದರು ಎಂದು ಸಂಚಾಲಕರು ಸಭೆಗೆ ತಿಳಿಸಿದರು.

ಆಯಾ ಬ್ಯಾಂಕ್‌ಗಳ ಪಾಲಿಗೆ ಹಣಕಾಸಿನ ವ್ಯವಹಾರ ಯೋಜನೆಯಾಗಿರುವ ವಾರ್ಷಿಕ ಸಾಲ ಯೋಜನೆ(ಎಸಿಪಿ)ಯ ಸೂತ್ರೀಕರಣದಲ್ಲಿ ಆರ್‌ಬಿಐ ಸೇರಿರುವುದಿಲ್ಲ ಎಂದು ಆರ್‌ಬಿಐ ಪ್ರಾದೇಶಿಕ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ಆದಾಗ್ಯೂ, ಇದರ ಮಾರ್ಗದರ್ಶನ, ಸಮಾಲೋಚನೆ, ಒಪ್ಪಿಗೆಗಾಗಿ ಆರ್‌ಬಿಐಗೆ ಸಲ್ಲಿಸಬಹುದು. ಇದಲ್ಲದೆ, ಸಾಲ ಯೋಜನೆಗಳ ರಚನೆ, ಮೇಲ್ವಿಚಾರಣೆ

ಮತ್ತು ಅನುಷ್ಠಾನವು ಕೆಳ ಮಟ್ಟದಲ್ಲಿ ಮಾಹಿತಿ ಕಲೆ ಹಾಕುವುದರಿಂದ ಪರಿಪೂರ್ಣತೆ ಸಾಧಿಸುವ(ಗ್ರ್ಯಾನ್ಯುಲರ್ ಬಾಟಮ್-ಅಪ್) ಕಾರ್ಯವಿಧಾನವನ್ನು ಅನುಸರಿಸಬೇಕು ಎಂದು ಅವರು ಒತ್ತಿಹೇಳಿದರು. ತಮ್ಮ ಉಸ್ತುವಾರಿಯಲ್ಲಿರುವ ಬ್ಲಾಕ್‌ಗಳು ಮತ್ತು ಜಿಲ್ಲೆಗಳಿಗೆ ಸಾಲ ಯೋಜನೆಗಳನ್ನು ಔಪಚಾರಿಕಗೊಳಿಸುವಾಗ ಸಂಭಾವ್ಯ ಸಂಪರ್ಕಿತ ಯೋಜನೆ(ಪೊಟೆನ್ಷಿಯಲ್ ಲಿಂಕ್ಡ್ ಪ್ಲಾನ್-ಪಿಎಲ್‌ಪಿ) ಮತ್ತು ಸಾಲ ವಿತರಣೆ ಸಾಧನೆಯ ಹಿಂದಿನ ದಾಖಲೆಯಲ್ಲಿ ಸೂಚಿಸಲಾದ ಸಾಲದ ವ್ಯಾಪ್ತಿಯನ್ನು ಗಣನೆಗೆ ತೆಗೆದುಕೊಳ್ಳುವಂತೆ ಎಲ್ಲಾ ಲೀಡ್ ಜಿಲ್ಲಾ ವ್ಯವಸ್ಥಾಪಕರಿಗೆ ನಿರ್ದೇಶಿಸುವಂತೆ ಅವರು ಎಸ್‌ಎಲ್‌ಬಿಸಿಗೆ ಸಲಹೆ ನೀಡಿದರು. ವಾರ್ಷಿಕ ಸಾಲ ಯೋಜನೆಯ ಗುರಿಯನ್ನು ನಬಾರ್ಡ್‌ನ ಪಿಎಲ್‌ಪಿ ಜತೆ ಜೋಡಿಸಬೇಕು. ಇದಲ್ಲದೆ, ನಬಾರ್ಡ್ ಪಿಎಲ್‌ಪಿಯನ್ನು ನಿಖರವಾಗಿ ರೂಪಿಸಬೇಕು. ಇದು ವಾಸ್ತವಿಕವಾಗಿರುವಾಗ ಮಹತ್ವಾಕಾಂಕ್ಷೆಯೂ ಆಗಿರುತ್ತದೆ ಎಂದರು.

ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿ ಮಾತನಾಡಿ, ಎಸ್‌ಎಲ್‌ಬಿಸಿಯ ಹಿರಿಯ ಆಡಳಿತ ಮಂಡಳಿ, ನಬಾರ್ಡ್ ಮತ್ತು ರಾಜ್ಯದ ಪ್ರಮುಖ ಬ್ಯಾಂಕ್‌ಗಳ ಪ್ರತಿನಿಧಿಗಳು ಸೇರಿ ಸಮಿತಿ ರಚಿಸುವಂತೆ ಸೂಚಿಸಿದರು.

**(ಕ್ರಮ: ಎಸ್‌ಎಲ್‌ಬಿಸಿ, ಎಸ್‌ಬಿಐ, ಯುಬಿಐ, ಬಿಒಬಿ, ಕೆಜಿಬಿ, ಕೆವಿಜಿಬಿ, ಎಚ್‌ಡಿಎಫ್‌ಸಿ, ಐಸಿಐಸಿಐ, ಎಕ್ಸಿಸ್, ಕರ್ನಾಟಕ ಬ್ಯಾಂಕ್)**

**ಕಾರ್ಯಸೂಚಿ ವಿಷಯ ಸಂಖ್ಯೆ – 6.1**

**ಎಂಎಸ್‌ಎಂಇ ವಲಯದ ಸಾಲ ವಿತರಣೆಯ ಅಂತರ(ಕೊರತೆ) ಗುರುತಿಸುವುದು ಮತ್ತು ವಾರ್ಷಿಕ ಸಾಲ ಯೋಜನೆ ಬಲಪಡಿಸುವುದು:**

ಎಂಎಸ್‌ಎಂಇ ವಲಯದ ಸಾಲ ವಿತರಣೆಯ ಅಂತರ(ಕೊರತೆ) ಗುರುತಿಸುವ ಬಗ್ಗೆ ಮತ್ತು ವಾರ್ಷಿಕ ಸಾಲ ಯೋಜನೆ ಬಲಪಡಿಸುವ ಬಗ್ಗೆ ಎಸ್‌ಎಲ್‌ಬಿಸಿಯು, ಕರ್ನಾಟಕ ಸರ್ಕಾರದ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಅವರ ಸೂಚನೆ ಸ್ವೀಕರಿಸಿದೆ ಎಂದು ಸಂಚಾಲಕರು ಸಭೆಯಲ್ಲಿ ತಿಳಿಸಿದರು.

ಎಂಎಸ್‌ಎಂಇ ವಲಯದ ಸಾಲದ ಅಂತರ ಗುರುತಿಸಲು ಮತ್ತು ಗುರಿ ಸಾಧಿಸಲು ಬ್ಯಾಂಕರ್‌ಗಳೊಂದಿಗೆ ಕರ್ನಾಟಕ ಸರ್ಕಾರದ ಎಂಎಸ್‌ಎಂಇ ಇಲಾಖೆ ಮತ್ತು ಎಂಎಸ್‌ಎಂಇ ಕಾರ್ಯದರ್ಶಿ ಅವರೊಂದಿಗೆ ಸಭೆ ನಡೆಸುವಂತೆ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಸೂಚಿಸಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 6.2**

**ಸಮಸ್ಯೆಗಳು - ತರಬೇತಿ ವೆಚ್ಚಗಳ ಬಾಕಿ ಉಳಿದಿರುವ 'ಬ್ಯಾಂಕರ್‌ಗಳ ವೃತ್ತಿಪರ ಹೊಣೆಗಾರಿಕೆ(ಬಿಪಿಎಲ್)' ಕ್ಲೇಮುಗಳ ಮರುಪಾವತಿ:**

ಇಲಾಖೆಯಿಂದ ಬಾಕಿ ಉಳಿದಿರುವ 34.19 ಕೋಟಿ ರೂ. ಬಿಪಿಎಲ್ ಕ್ಲೇಮುಗಳನ್ನು ಸಾಧ್ಯವಾದಷ್ಟು ಬೇಗ ಪಾವತಿಸುವಂತೆ ಉಪಸಂಚಾಲಕರು ಮನವಿ ಮಾಡಿದರು. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಇಲಾಖೆಯ ಯೋಜನಾ(ಮಿಷನ್) ನಿರ್ದೇಶಕರು ಮಾತನಾಡಿ, ಇಲಾಖೆಯು ಇದುವರೆಗೆ ಭಾರತ ಸರ್ಕಾರದಿಂದ 11 ಕೋಟಿ ರೂ. ಸ್ವೀಕರಿಸಿದೆ, ಅದನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದರು.

ಬಾಕಿ ಉಳಿದಿರುವ ಬಿಪಿಎಲ್ ಕ್ಲೇಮ್ ಬಾಕಿಯನ್ನು ಆದಷ್ಟು ಬೇಗ ಪಾವತಿಸುವಂತೆ ಅಧ್ಯಕ್ಷರು, ಎನ್‌ಎಲ್‌ಎಂ ಇಲಾಖೆಗೆ ಸೂಚಿಸಿದರು.

**(ಕ್ರಮ: ಕೌಶಲ್ಯ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 7**

**22.4 ವಿಜಯನಗರ ಜಿಲ್ಲೆಯಲ್ಲಿ ಹೊಸ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ(ಆರ್‌ಎಸ್‌ಇಟಿಐ)ಗಳ ಆರಂಭಿಸುವುದು**

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು ದಿನಾಂಕ 13-09-2024ರಲ್ಲಿ ವಿಜಯನಗರ ಜಿಲ್ಲಾಧಿಕಾರಿ ಅವರಿಗೆ ಇ-ಮೇಲ್ ರವಾನಿಸಿದ್ದು, ಉದ್ದೇಶಿತ ಸ್ಥಳದಲ್ಲಿ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ(ಆರ್‌ಎಸ್‌ಇಟಿಐ) ಆರಂಭಿಸುವ ವಿಚಾರದಲ್ಲಿ ಮುಂದುವರಿಯಲು ಮತ್ತು ಸ್ಪಷ್ಟ ಪ್ರವೇಶಕ್ಕೆ ಅವಕಾಶ ಕಲ್ಪಿಸುವಂತೆ ವಿನಂತಿಸಿ ಪತ್ರ ಬರೆದಿದೆ ಎಂದು ಎಸ್‌ಎಲ್‌ಬಿಸಿ ಸಂಚಾಲಕರು ಸಭೆಗೆ ತಿಳಿಸಿದರು.

ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ(ಆರ್‌ಎಸ್‌ಇಟಿಐ)ಯನ್ನು ತಕ್ಷಣವೇ ಪ್ರಾರಂಭಿಸಲು ಜಿಲ್ಲಾ ಪ್ರಾಧಿಕಾರವು ಬಳಕೆಯಾಗದ ಕಾಲೇಜು ಕಟ್ಟಡವನ್ನು ನೀಡಿದೆ. ಎಸ್‌ಬಿಐ ಅಧಿಕಾರಿಗಳು ಎರಡೂ ಸ್ಥಳಗಳಿಗೆ ಭೇಟಿ ನೀಡಿದ್ದಾರೆ. ವಿಜಯನಗರ ಎಸ್‌ಬಿಐ ಪ್ರಾದೇಶಿಕ ವ್ಯವಸ್ಥಾಪಕರು ವಿಜಯನಗರ ಜಿಲ್ಲಾಧಿಕಾರಿಗೆ ಸ್ವೀಕಾರ ಪತ್ರ ಬರೆದು, ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ 2 ಕಟ್ಟಡಗಳಲ್ಲಿ 8 ತರಗತಿ ಕೊಠಡಿಗಳಲ್ಲಿ ತಕ್ಷಣವೇ ಆರ್‌ಎಸ್‌ಇಟಿಐ ಪ್ರಾರಂಭಿಸಲು ಹಸ್ತಾಂತರಿಸುವಂತೆ ಮನವಿ ಮಾಡಿದ್ದಾರೆ ಎಂದರು.

ಈ ವಿಷಯದಲ್ಲಿ ರಾಜ್ಯ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಎಸ್‌ಎಲ್‌ಬಿಸಿ ಮನವಿ ಮಾಡಿತು.

**(ಕ್ರಮ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೌಶಲ್ಯ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 8**

**ಕಿಸಾನ್ ಕ್ರೆಡಿಟ್ ಕಾರ್ಡ್(ಕೆಸಿಸಿ) ಸಾಲಗಳಿಗೆ 1% ಬಡ್ಡಿ ಸಹಾಯಧನ:**

ಕರ್ನಾಟಕ ಸರ್ಕಾರವು ಕಿಸಾನ್ ಕ್ರೆಡಿಟ್ ಕಾರ್ಡ್(ಕೆಸಿಸಿ) ಸಾಲವನ್ನು ತ್ವರಿತವಾಗಿ ಮರುಪಾವತಿ ಮಾಡುವ ರೈತರಿಗೆ 1 ಲಕ್ಷ ರೂ.ವರೆಗಿನ ಬೆಳೆ ಸಾಲ(ಕೆಸಿಸಿ)ಗಳಿಗೆ 1% ಬಡ್ಡಿ ರಿಯಾಯಿತಿ(ಸಹಾಯಧನ) ನೀಡುತ್ತಿದೆ ಎಂದು ಉಪಸಂಚಾಲಕರು ಮಾಹಿತಿ ನೀಡಿದರು. ಆದರೆ ಕೃಷಿ ಇಲಾಖೆಯಿಂದ ಕಳೆದ 3 ವರ್ಷಗಳಿಂದ 25 ಕೋಟಿ ರೂ. ಬಡ್ಡಿ ಸಹಾಯಧನ ಬಂದಿಲ್ಲ.

ಬಾಕಿ ಉಳಿದಿರುವ ಶೇ.1 ಬಡ್ಡಿ ಕ್ಲೇಮ್ ಅನ್ನು ಶೀಘ್ರವೇ ಇತ್ಯರ್ಥಪಡಿಸುವಂತೆ ಅಧ್ಯಕ್ಷರು, ಕೃಷಿ ಇಲಾಖೆಗೆ ಸೂಚಿಸಿದರು.

**(ಕ್ರಮ: ಕೃಷಿ ಇಲಾಖೆ)**

**ಕಾರ್ಯಸೂಚಿ ವಿಷಯ ಸಂಖ್ಯೆ – 9**

**ಕ್ಲೇಮು ಮಾಡದ ಸರ್ಕಾರಿ ಠೇವಣಿಗಳು(ಡಿಇಎಎಫ್)**

ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಹಣಕಾಸು ಸುಧಾರಣೆ ವಿಭಾಗದ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಪರಾಮರ್ಶೆ ಸಭೆ ನಡೆಸಲಾಗಿದ್ದು, ಎಲ್ಲಾ 3,305 ಡಿಇಎಎಫ್(ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿ) ಖಾತೆಗಳನ್ನು ತಕ್ಷಣವೇ ಸಕ್ರಿಯಗೊಳಿಸಬೇಕು. ಖಾತೆಗಳನ್ನು ಸಕ್ರಿಯಗೊಳಿಸುವ ಅಥವಾ ಮುಚ್ಚುವ ಮೂಲಕ ಈ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು

**ಕಾರ್ಯಸೂಚಿ ವಿಷಯ ಸಂಖ್ಯೆ – 10**

**10.1 ಗೃಹಲಕ್ಷ್ಮಿ ಎನ್ ಪಿಸಿಐ ವೈಫಲ್ಯ ಪ್ರಕರಣಗಳು:**

ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ(ಎನ್‌ಪಿಸಿಐ) ವೈಫಲ್ಯ ಪ್ರಕರಣಗಳು ಮತ್ತು ಖಾಲಿ(ಬ್ಲಾಂಕ್) ಆಧಾರ್‌ನಿಂದಾಗಿ ಗೃಹಲಕ್ಷ್ಮಿ ಪ್ರಯೋಜನಗಳು ಫಲಾನುಭವಿಗಳಿಗೆ ಸಿಗುತ್ತಿಲ್ಲ ಎಂದು ಕರ್ನಾಟಕ ಸರ್ಕಾರದ ಇ-ಆಡಳಿತ ಇಲಾಖೆ ಮಾಹಿತಿ ನೀಡಿದೆ. ಈ ವಿಷಯದ ಬಗ್ಗೆ ಸದಸ್ಯ ಬ್ಯಾಂಕ್‌ಗಳು ಮತ್ತು ಇ-ಆಡಳಿತ ಇಲಾಖೆಯೊಂದಿಗೆ ಸಭೆ ಕರೆಯಲಾಗಿದ್ದು, ಎಸ್‌ಎಫ್‌ಟಿಪಿ(ಸೆಕ್ಯೂರ್ ಫೈಲ್ ಟ್ರಾನ್ಸ್ ಫರ್ ಪ್ರೋಟೋಕಾಲ್) ಸೌಲಭ್ಯದ ಮೂಲಕ ಎನ್‌ಪಿಸಿಐ ವೈಫಲ್ಯ ಪ್ರಕರಣಗಳನ್ನು ನಿರ್ವಹಿಸಲು ನೋಡಲ್ ಅಧಿಕಾರಿಯ ವಿವರಗಳನ್ನು ಸಲ್ಲಿಸಬೇಕು ಎಂದು ಸದಸ್ಯ ಬ್ಯಾಂಕ್‌ಗಳಿಗೆ ಸೂಚಿಸಲಾಗಿದೆ.

ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರದ ಸಿಇಒ ಡಾ. ದಿಲೀಶ್ ಸಸಿ ಮಾತನಾಡಿ, ದತ್ತಾಂಶ ಹಂಚಿಕೊಳ್ಳಲು ಬ್ಯಾಂಕ್‌ಗಳು ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಬ್ಯಾಂಕುಗಳು ತಮ್ಮ ಡೇಟಾಬೇಸ್‌ನ ನಿರೂಪಣೆಯ ಮೂಲಕ ಗೃಹಲಕ್ಷ್ಮಿ ಫಲಾನುಭವಿಗಳನ್ನು ಗುರುತಿಸಬಹುದು. ಬ್ಯಾಂಕ್‌ಗಳು ಪ್ರಧಾನ ಮಂತ್ರಿಗಳ ಜನ್-ಧನ್ ಯೋಜನೆ(ಪಿಎಂಜೆಡಿವೈ)ಗೆ ಸೇರಿರದ ಎಲ್ಲಾ ಫಲಾನುಭವಿಗಳನ್ನು ಪಿಎಂಜೆಡಿವೈ ಫಲಾನುಭವಿಗಳಾಗಿ ಪರಿವರ್ತಿಸಬೇಕು ಎಂದು ತಿಳಿಸಿದರು.

ಆಗ ಎಚ್‌ಡಿಎಫ್‌ಸಿ ಬ್ಯಾಂಕ್ ಅಧಿಕಾರಿಗಳು ಮಾತನಾಡಿ, ನಾವು ಏಕೀಕೃತ(ಸ್ಟ್ಯಾಟಿಕ್) ಐಪಿ ವಿಳಾಸ ಹೊಂದಿಲ್ಲ, ಡೈನಾಮಿಕ್ ಐಪಿ(ಇಂಟರ್ನೆಟ್ ಪ್ರೊಟೋಕಾಲ್)ಯನ್ನು ಮಾತ್ರ ಹೊಂದಿದ್ದೇವೆ ಎಂದರು.

ಗೃಹಲಕ್ಷ್ಮಿ ಪಿಎಂಜೆಡಿವೈಗೆ ಸೇರಿರದ ಫಲಾನುಭವಿಗಳನ್ನು ಪಿಎಂಜೆಡಿವೈ ಯೋಜನೆಗೆ ಫಲಾನುಭವಿಗಳಾಗಿ ಪರಿವರ್ತಿಸಲು ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ(ಜಿಒ) ಹೊರಡಿಸಬೇಕು ಎಂದು ಎಸ್‌ಎಲ್‌ಬಿಸಿ ಸಂಚಾಲಕರು ಮನವಿ ಮಾಡಿದರು.

ಡಿಬಿಟಿ-ನೇರ ನಗದು ವರ್ಗಾವಣೆಗಾಗಿ ಇಲಾಖೆಗಳೊಂದಿಗೆ ಸಂಪರ್ಕ ಸಾಧಿಸಲು ನೋಡಲ್ ಅಧಿಕಾರಿ ನೇಮಿಸುವಂತೆ ಎಲ್ಲಾ ಬ್ಯಾಂಕ್‌ಗಳಿಗೆ ಸುತ್ತೋಲೆ ಹೊರಡಿಸುವಂತೆ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಎಸ್‌ಎಲ್‌ಬಿಸಿಗೆ ಮನವಿ ಮಾಡಿದರು. ಐಪಿ ವಿಳಾಸ ವಿಶೇಷತೆಗಳ ಬಗ್ಗೆ ಸ್ಪಷ್ಟನೆ ನೀಡುವಂತೆ ಇ-ಆಡಳಿತ ಇಲಾಖೆಗೆ ಸೂಚಿಸಿದರು. ಪಿಎಂಜೆಡಿವೈ ಖಾತೆ ಹೊಂದುವುದರಿಂದ ಸಿಗುವ ಪ್ರಯೋಜನಗಳು ಮತ್ತು ವೈಶಿಷ್ಟ್ಯಗಳನ್ನು ಸೂಚಿಸುವ ಸುತ್ತೋಲೆಯನ್ನು ಸರ್ಕಾರ ಮತ್ತು ಎಸ್‌ಎಲ್‌ಬಿಸಿ ಹೊರಡಿಸಬೇಕು ಎಂದು ಅವರು ಸೂಚಿಸಿದರು.

ಬಿಸಿ(ವ್ಯವಹಾರ ಪ್ರತಿನಿಧಿಗಳು) ಸಖಿಗಳ ಸಹಾಯದಿಂದ ಎಲ್ಲಾ ಪಿಎಂಜೆಡಿವೈ ಅಲ್ಲದ ಖಾತೆಗಳನ್ನು ಪಿಎಂಜೆಡಿವೈ ಖಾತೆಗಳಾಗಿ ಪರಿವರ್ತಿಸಲು ಬ್ಯಾಂಕ್‌ಗಳು ಅಭಿಯಾನ ಪ್ರಾರಂಭಿಸಬೇಕು ಎಂದು ಅವರು ಒತ್ತಿ ಹೇಳಿದರು.

ಸರ್ಕಾರದ ಸುತ್ತೋಲೆ ಮತ್ತು ಸರ್ಕಾರಿ ಆದೇಶಕ್ಕೆ ಸಂಬಂಧಿಸಿದಂತೆ ಎಲ್ಲಾ ಪಾಲುದಾರರೊಂದಿಗೆ ಸಭೆ ನಡೆಸುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಹಣಕಾಸು ಇಲಾಖೆಯ ಕಾರ್ಯದರ್ಶಿಗೆ ಮನವಿ ಮಾಡಿದರು.

**(ಕ್ರಮ: ಎಲ್ಲಾ ಬ್ಯಾಂಕ್‌ಗಳು, ಇ-ಆಡಳಿತ ಇಲಾಖೆ, ಕರ್ನಾಟಕ ಸರ್ಕಾರ)**

**10.2: ಶುಲ್ಕ ಅಥವಾ ಅಡಮಾನ ವಿಧಿಸಲು ಅಥವಾ ತೆಗೆದುಹಾಕಲು ಬ್ಯಾಂಕರ್‌ಗಳ ಆಧಾರ್ ಮತ್ತು ಕಾಯ ಖಾತೆ ಸಂಖ್ಯೆ(ಪ್ಯಾನ್) ವಿವರಗಳನ್ನು ಬಹಿರಂಗಪಡಿಸುವುದು:**

ಅಡಮಾನ ಪತ್ರಗಳ ನೋಂದಣಿಯು ಸಾಲಗಾರರಿಗೆ ನೀಡಿದ ಸಾಲದ ಹಣಕಾಸುಗಳನ್ನು ಸುರಕ್ಷಿತಗೊಳಿಸಲು ಬ್ಯಾಂಕ್‌ಗಳಿಗೆ ಪ್ರಮುಖ ಅಂಶವಾಗಿದೆ. ಕೆಲವು ದಿನಗಳಿಂದ, ಸಬ್-ರಿಜಿಸ್ಟ್ರಾರ್ ಕಚೇರಿಗಳು ಬ್ಯಾಂಕ್ ಅಧಿಕಾರಿಗಳ ಆಧಾರ್ ಸಂಖ್ಯೆ ಮತ್ತು ಕಾಯಂ ಖಾತೆ ಸಂಖ್ಯೆ(ಪ್ಯಾನ್) ವಿವರಗಳನ್ನು ಒದಗಿಸುವಂತೆ ಬ್ಯಾಂಕ್‌ಗಳನ್ನು ಒತ್ತಾಯಿಸುತ್ತಿವೆ ಎಂಬುದು ಸದಸ್ಯ ಬ್ಯಾಂಕ್‌ಗಳಿಂದ ವರದಿಯಾಗಿದೆ. ಶುಲ್ಕ ಅಥವಾ ಅಡಮಾನ ವಿಧಿಸಲು ಅಥವಾ ತೆಗೆದುಹಾಕಲು ಆಧಾರ್ ಗೆ ಸಂಪರ್ಕಿಸಿದ ಒಂದು ಬಾರಿಯ ಪಾಸ್‌ವರ್ಡ್(ಒಟಿಪಿ) ಒದಗಿಸುವಂತೆ ಕೇಳುತ್ತಾ ಬಂದಿವೆ.

ಹಾಗಾಗಿ, ಆಧಾರ್ ಮತ್ತು ಪ್ಯಾನ್ ವಿವರಗಳ ಬದಲಿಗೆ ಅಧಿಕೃತ ಪತ್ರದ ಜೊತೆಗೆ ಗುರುತಿನ ಪುರಾವೆಯಾಗಿ ಬ್ಯಾಂಕ್‌ಗಳು ನೀಡುವ ಗುರುತಿನ ಚೀಟಿ(ಐಡಿ)ಯನ್ನು ಸ್ವೀಕರಿಸಬೇಕು ಎಂದು ಎಸ್‌ಎಲ್‌ಬಿಸಿ, ರಾಜ್ಯ ಸರ್ಕಾರಕ್ಕೆ ಮನವಿ ಮಾಡಿತು.

**(ಕ್ರಮ: ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ)**

**10.3 ವಿವಿಧ ಸರ್ಕಾರಿ ಪ್ರಾಯೋಜಿತ ಯೋಜನೆಗಳ ಅಡಿ, ಸಾಲದ ಅರ್ಜಿಗಳಿಗಾಗಿ ಏಕೀಕೃತ ಪೋರ್ಟಲ್ ಅಭಿವೃದ್ಧಿ**

ರಾಷ್ಟ್ರೀಯ ಮಾಹಿತಿ ಕೇಂದ್ರ(ಎನ್‌ಐಸಿ)ಯೊಂದಿಗೆ ಸಮಾಲೋಚನೆ ನಡೆಸಿ, ಎಲ್ಲಾ ಸರ್ಕಾರಿ ಪ್ರಾಯೋಜಿತ ಯೋಜನೆಗಳ ಸಾಲದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ರಾಜ್ಯ ಸರ್ಕಾರದ ಸಹಾಯದಿಂದ ಬಿಹಾರ, ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲಿ ಒಂದು ಪೋರ್ಟಲ್ ಅಭಿವೃದ್ಧಿಪಡಿಸಲಾಗಿದೆ ಎಂದು ಎಸ್‌ಎಲ್‌ಬಿಸಿ ಸಂಚಾಲಕರು ಸಭೆಗೆ ತಿಳಿಸಿದರು.

ಈ ಪೋರ್ಟಲ್ ಬಳಕೆ ಮತ್ತು ವ್ಯಾಪ್ತಿಯ ಬಗ್ಗೆ ಗಮನ ಹರಿಸಿ. ಜತೆಗೆ, ಈ ಪೋರ್ಟಲ್ ಯಾವುದಾದರೂ ಸಂಚಿತ ಮೌಲ್ಯವನ್ನು ಸೇರಿಸುತ್ತದೆಯೇ ಮತ್ತು ಯೋಜನೆಯೊಂದಿಗೆ ಸೂಕ್ತವಾಗುತ್ತದೆಯೇ ಎಂಬುದನ್ನು ಪರಿಶೀಲಿಸುವಂತೆ ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ಇ-ಆಡಳಿತ ಇಲಾಖೆಗೆ ಮನವಿ ಮಾಡಿದರು.

**(ಕ್ರಮ: ಇ-ಆಡಳಿತ ಇಲಾಖೆ. ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 11**

**11.1: ಲೀಡ್ ಜಿಲ್ಲಾ ವ್ಯವಸ್ಥಾಪಕರು(ಎಲ್ ಡಿಎಂ)ಗಳು ಮತ್ತು ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರಿಗೆ(ಡಿಡಿಎಂ) ನಿರ್ದೇಶನಗಳು:**

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

2024 ಸೆಪ್ಟೆಂಬರ್ 20ರಂದು ನಡೆದ ಎಲ್ ಡಿಎಂ/ಡಿಡಿಎಂ ಕಾನ್ಫರೆನ್ಸ್‌ನಲ್ಲಿ ಆರ್‌ಬಿಐ ಉಪ ಗವರ್ನರ್, ತಮ್ಮ ಪ್ರಮುಖ ಭಾಷಣದಲ್ಲಿ ಒತ್ತು ನೀಡಿದ್ದ ನಿರೀಕ್ಷೆಗಳ ಮೇಲೆ (ಕೆಳಗೆ ಪ್ರಸ್ತಾಪಿಸಿರುವ ವಿಷಯಗಳು) ಕಾರ್ಯ ನಿರ್ವಹಿಸಬೇಕು ಎಂದು ಆರ್‌ಬಿಐ ಪ್ರಾದೇಶಿಕ ನಿರ್ದೇಶಕರು ಎಸ್‌ಎಲ್‌ಬಿಸಿಗೆ ಸಲಹೆ ನೀಡಿದರು.

ನಿಮ್ಮ ಜಿಲ್ಲೆಗಳನ್ನು ಅರಿಯಿರಿ, ದತ್ತಾಂಶ ವಿಶ್ಲೇಷಣೆ ಮತ್ತು ಕ್ಷೇತ್ರ ಸಮೀಕ್ಷೆಗಳ ಮೇಲೆ ಹತೋಟಿ ಸಾಧಿಸುವುದು, ಸೂತ್ರೀಕರಣ ಮೇಲ್ವಿಚಾರಣೆ ಮತ್ತು ಸಾಲ ಯೋಜನೆಗಳ ಅನುಷ್ಠಾನದಲ್ಲಿ ಕೆಳ ಮಟ್ಟದಿಂದ ಪರಿಪೂರ್ಣತೆಯ ತನಕ ಮುಟ್ಟುವ ಕಾರ್ಯ ವಿಧಾನವನ್ನು ಅನುಸರಿಸಬೇಕು. ಎಂಎಸ್‌ಎಂಇ, ಸ್ವಸಹಾಯ ಗುಂಪುಗಳಿಗೆ ಸಾಲ ನೀಡುವಲ್ಲಿನ ಅಂತರ ಪರಿಹರಿಸಬೇಕು, ಮಹಿಳಾ ನೇತೃತ್ವದ ಉದ್ಯಮಗಳಿಗೆ ಬೆಂಬಲ ನೀಡುವ ಮೂಲಕ ಲಿಂಗ ಭೇದ(ತಾರತಮ್ಯ) ನಿವಾರಿಸಬೇಕು.

**(ಕ್ರಮ: ಎಲ್ಲಾ ಲೀಡ್ ಜಿಲ್ಲಾ ವ್ಯವಸ್ಥಾಪಕರು)**

**11.2: ಕರ್ನಾಟಕದಲ್ಲಿ ಎಂಎಸ್‌ಎಂಇ ಕುರಿತು ಆರ್‌ಬಿಐ ಅಧ್ಯಯನ:**

ಬೆಂಗಳೂರಿನಲ್ಲಿರುವ ಆರ್‌ಬಿಐನ ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ(ಎಫ್‌ಐಡಿಡಿ), ಕರ್ನಾಟಕದಲ್ಲಿ ಎಂಎಸ್‌ಎಂಇಗಳ ಸ್ಥಿತಿಗತಿಯ ಮೇಲೆ ಗಮನ ಕೇಂದ್ರೀಕರಿಸುವ ಅಧ್ಯಯನ ಕೈಗೊಂಡಿದೆ. ಅವುಗಳ ಭೌಗೋಳಿಕ ವಿತರಣೆ, ರಾಜ್ಯ ಮತ್ತು ವೈಯಕ್ತಿಕ ಜಿಲ್ಲಾ ಮಟ್ಟದಲ್ಲಿ ಸಾಲ ಸಂಪರ್ಕದ ಪ್ರಮಾಣ ಮತ್ತು ಸಾಲ ಹೆಚ್ಚಿಸಲು ವಾರ್ಷಿಕ ಸಾಲ ಯೋಜನೆ(ಎಸಿಪಿ) ಅಡಿ, ವಿತರಣಾ ಗುರಿಗಳಿಗೆ ಪ್ರತಿಯಾಗಿ ಬ್ಯಾಂಕ್ ಕಾರ್ಯಕ್ಷಮತೆಯ ಮೌಲ್ಯಮಾಪನ, ಈ ಪ್ರಮುಖ ವಲಯಕ್ಕೆ ಸಾಲ ಹರಿವು ಹೆಚ್ಚಳ ಮತ್ತಿತರ ವಿಚಾರಗಳ ಬಗ್ಗೆ ಅಧ್ಯಯನ ನಡೆಸಿದೆ. 2022, 2023, ಮತ್ತು 2024 ಮಾರ್ಚ್ 31ರ ವರೆಗೆ ಅನ್ವಯವಾಗುವಂತೆ, ಎಂಎಸ್‌ಎಂಇ ಉದ್ದಿಮೆಗಳ ಸಾಲದ ಬಾಕಿ ಮೊತ್ತಕ್ಕೆ ಹೋಲಿಸಿದರೆ ಖಾತೆಗಳ ಸಂಖ್ಯೆಯಲ್ಲಿ ಪ್ರತಿಫಲಿಸಿದಂತೆ, ಎಂಎಸ್‌ಎಂಇಗಳ ತಪ್ಪು ವರ್ಗೀಕರಣದ ಸಾಧ್ಯತೆಯನ್ನು ಅಧ್ಯಯನವು ಬಹಿರಂಗಪಡಿಸಿದೆ. ಜಿಲ್ಲೆಗಳ ನಡುವೆ ಸಾಲ ಸಂಪರ್ಕ ಮತ್ತು ವಾರ್ಷಿಕ ಸಾಲ ಯೋಜನೆಯ ಕಾರ್ಯಕ್ಷಮತೆಯಲ್ಲಿ ಗಮನಾರ್ಹ ಅಂತರ ಇರುವುದನ್ನು ಅಧ್ಯಯನ ಗಮನಿಸಿದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು).**

**11.3: ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆ(ಎಂಎಸ್‌ಎಂಇ)ಗಳಿಗೆ ಸಾಲ ಹರಿವು ಸುಗಮಗೊಳಿಸುವುದು**

ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಎಂಎಸ್‌ಎಂಇಗಳಿಗೆ ಸಾಲ ನೀಡುವ ಮತ್ತು ಸಾಲದ ಹರಿವು ಸುಗಮಗೊಳಿಸುವ ಕುರಿತು ನವೀಕರಿಸಿದ ಮಾಸ್ಟರ್ ನಿರ್ದೇಶನದ ಪ್ರಕಾರ, ಸಾಲ ಪಡೆಯಲು ಬಯಸುವ ಎಂಎಸ್‌ಎಂಇ ಉದ್ದಿಮೆದಾರರಿಗೆ 25 ಲಕ್ಷ ರೂ.ವರೆಗಿನ ಸಾಲ ನೀಡಿಕೆಯ ಬ್ಯಾಂಕ್ ನಿರ್ಧಾರ ಸಮಯವು 14 ಕೆಲಸದ ದಿನಗಳನ್ನು ಮೀರಬಾರದು. ಇದಲ್ಲದೆ, ಬ್ಯಾಂಕ್‌ಗಳು ನಿರೀಕ್ಷಿತ ಎಂಎಸ್‌ಎಂಇ ಗ್ರಾಹಕನಿಗೆ ದಾಖಲೆಗಳ ಸೂಚಕ ಪಟ್ಟಿಯನ್ನು ಒದಗಿಸಬೇಕು. ಅಪ್ಲಿಕೇಶನ್‌ನ ಸ್ವೀಕೃತಿ ಮತ್ತು ಸ್ಥಿತಿ ನವೀಕರಣವನ್ನು ಸ್ವಯಂಚಾಲಿತವಾಗಿ ಎಂಎಸ್‌ಎಂಇ ಗ್ರಾಹಕರಿಗೆ ಕಳುಹಿಸಲಾಗಿದೆ ಎಂಬುದನ್ನು ಬ್ಯಾಂಕ್ ಖಚಿತಪಡಿಸಬೇಕು. ಎಂಎಸ್‌ಎಂಇ ಗ್ರಾಹಕರ ಸಂದರ್ಭದಲ್ಲಿ, ಸಾಲದ ಅರ್ಜಿ ತಿರಸ್ಕರಿಸಲು ಅಗತ್ಯವಾದ ಮುಖ್ಯ ಕಾರಣವನ್ನು ಬ್ಯಾಂಕ್, ಲಿಖಿತವಾಗಿ ತಿಳಿಸಬೇಕು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**11.4: ಪಿಎಲ್‌ಪಿ(ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ)ಯ ಪೂರ್ವಭಾವಿ ಸಭೆ ಮತ್ತು ಪಿಎಲ್‌ಪಿ ಪೂರ್ವಭಾವಿ ತಯಾರಿಗಾಗಿ ಗಡುವು**

ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳ ನಿಗದಿತ ಸಮಯದ ಪ್ರಕಾರ, ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ(ಪಿಎಲ್‌ಪಿ)ಯ ಪೂರ್ವಭಾವಿ ಸಭೆಗೆ ತಯಾರಿ ನಡೆಸಲಾಗಿಲ್ಲ. ಪಿಎಲ್‌ಪಿ ಪೂರ್ವಭಾವಿ ಸಭೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಲೀಡ್ ಜಿಲ್ಲಾ ವ್ಯವಸ್ಥಾಪಕರು ಮೇಲ್ವಿಚಾರಣೆ ಮಾಡಬೇಕು ಎಂದು ಸಲಹೆ ನೀಡಲಾಯಿತು.

**(ಕ್ರಮ: ಎಸ್‌ಎಲ್‌ಬಿಸಿ ಮತ್ತು ನಬಾರ್ಡ್)**

**11.5: ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ ಗ್ರಾಮೀಣ ಕೇಂದ್ರಗಳಲ್ಲಿ(ಯುಆರ್‌ಸಿ) ಬ್ಯಾಂಕಿಂಗ್ ಸೇವೆ ಒದಗಿಸುವುದು(ಆರ್‌ಬಿಐ ಪತ್ರ ಲಗತ್ತಿಸಲಾಗಿದೆ):**

ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ ಗ್ರಾಮೀಣ ಕೇಂದ್ರ(ಯುಆರ್‌ಸಿ)ಗಳಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವಂತೆ ಆರ್‌ಬಿಐ, 2024 ಅಕ್ಟೋಬರ್ 25 ರಂದು ಸುತ್ತೋಲೆ ಹೊರಡಿಸಿದೆ.

**ಎಸ್‌ಎಲ್‌ಬಿಸಿಗೆ ಈ ಕೆಳಕಂಡ ಸಲಹೆ ನೀಡಲಾಗಿದೆ**

- ಆರ್‌ಬಿಐ ಒದಗಿಸಿದ ಪಟ್ಟಿಯ ಪ್ರಕಾರ**,** ರಾಜ್ಯವಾರು ಯುಆರ್‌ಸಿಗಳ ಪಟ್ಟಿ ಪರಿಶೀಲಿಸಬೇಕು. (ರಾಜ್ಯಾದ್ಯಂತ ಇರುವ ಯುಆರ್‌ಸಿಗಳ ಸಂಖ್ಯೆ: 18,724, ಶ್ರೇಣಿ 5 ಕೇಂದ್ರಗಳಲ್ಲಿ ಯುಆರ್‌ಸಿ ಸಂಖ್ಯೆ: 4**7**)
- ಸಿಐಎಸ್ ಬಿಐ ಪೋರ್ಟಲ್‌ನಲ್ಲಿ ಯಾವುದೇ ಸಿಬಿಎಸ್ ಸಕ್ರಿಯಗೊಳಿಸಿದ ಶಾಖೆಯನ್ನು ಯುಆರ್‌ಸಿ ಎಂದು ತಪ್ಪಾಗಿ ನಮೂದಿಸಿದ್ದರೆ, ಅದನ್ನು ಸರಿಪಡಿಸಬೇಕು.
- ಉಳಿದಿರುವ ಗ್ರಾಮೀಣ ಕೇಂದ್ರಗಳು ಅಂದರೆ ಶ್ರೇಣಿ-5 ಯುಆರ್‌ಸಿ ಕೇಂದ್ರಗಳಲ್ಲಿ, ಎಲ್‌ಬಿಎಸ್‌ನ ಮಾಸ್ಟರ್ ಸರ್ಕ್ಯುಲರ್ ಪ್ಯಾರಾ 5.3(ii) ಪ್ರಕಾರ, ಬ್ಯಾಂಕಿಂಗ್ ಶಾಖೆ ತೆರೆಯಲು ಎಸ್‌ಎಲ್‌ಬಿಸಿ ಉನ್ನತ ಆದ್ಯತೆ ನೀಡಬೇಕು.
- ಪ್ರತಿ ಜಿಲ್ಲಾ ಸಲಹಾ ಸಮಿತಿ(ಡಿಸಿಸಿ) ಸಭೆಗಳಲ್ಲಿ ಏಕರೂಪವಾಗಿ ಶ್ರೇಣಿ-6 ಕೇಂದ್ರಗಳಲ್ಲಿ ಯುಆರ್‌ಸಿಗಳ ವ್ಯಾಪ್ತಿ ಪರಿಶೀಲಿಸಲು ಲೀಡ್ ಜಿಲ್ಲಾ ವ್ಯವಸ್ಥಾಪಕರಿಗೆ ಸಲಹೆ ನೀಡಬೇಕು.
- ಯಾವುದೇ ಮತ್ತು ಯಾವಾಗ ಬ್ಯಾಂಕಿಂಗ್ ಶಾಖೆ ತೆರೆದಾಗಲೂ ಸಿಐಎಸ್ ಬಿಐ ಪೋರ್ಟಲ್ ಪರಿಷ್ಕರಿಸಲು ಸದಸ್ಯ ಬ್ಯಾಂಕ್‌ಗಳಿಗೆ ಸಲಹೆ ನೀಡಬೇಕು.

(**ಕ್ರಮ: ಎಲ್ಲಾ ಎಲ್ ಡಿಎಂಗಳು**, **ಎಲ್ಲಾ ಬ್ಯಾಂಕ್‌ಗಳು ಮತ್ತು ಎಸ್‌ಎಲ್‌ಬಿಸಿ**)

**11.6: ಸಣ್ಣ ಮತ್ತು ಅತಿಸಣ್ಣ ರೈತರಿಗೆ ವಿರುದ್ಧ(ಪ್ರತಿಯಾಗಿ) ಕೆಸಿಸಿ ಸಂಪರ್ಕ:**

ಬೆಂಗಳೂರಿನ ಎಫ್‌ಐಡಿಡಿ**,** 12 ಪ್ರಮುಖ ಬ್ಯಾಂಕುಗಳಲ್ಲಿ ಎಸ್‌ಬಿ ಖಾತೆಗಳನ್ನು ಹೊಂದಿರುವ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಪ್ರತಿಯಾಗಿ ಕೆಸಿಸಿ ಸಂಪರ್ಕದ ಸಮೀಕ್ಷೆ ನಡೆಸಿದೆ. 2024 ಮಾರ್ಚ್ 31ರ ವೇಳೆಗೆ, ರಾಜ್ಯದ 12 ಪ್ರಮುಖ ಬ್ಯಾಂಕುಗಳಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರ ಸಂಖ್ಯೆ 27.07 ಲಕ್ಷವಾಗಿದ್ದು**,** ಅವರ ಒಟ್ಟು ಕೆಸಿಸಿ ಖಾತೆಗಳ ಸಂಖ್ಯೆ 9.58 ಲಕ್ಷ ಅಂದರೆ**,** 12 ಬ್ಯಾಂಕುಗಳಲ್ಲಿ ಒಟ್ಟು ಸಣ್ಣ ಮತ್ತು ಅತಿಸಣ್ಣ ರೈತರ ಕೆಸಿಸಿ ಖಾತೆಗಳ ಪ್ರಮಾಣ 35.39% ರಷ್ಟಿದೆ. ಕೆಲವು ಪ್ರಮುಖ

ಬ್ಯಾಂಕ್‌ಗಳು ಅಂದರೆ, ಕೋಟಕ್ ಮಹೀಂದ್ರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇನ್ನು ದತ್ತಾಂಶ ಹಂಚಿಕೊಳ್ಳಬೇಕಾಗಿದೆ. ಎಸ್‌ಎಲ್‌ಬಿಸಿಯು ರಾಜ್ಯಾದ್ಯಂತದ ಸದಸ್ಯ ಬ್ಯಾಂಕುಗಳಲ್ಲಿ ಕೆಸಿಸಿ ಸಂಪರ್ಕ ಹೊಂದಿರುವ ಕುರಿತ ಬೆಳವಣಿಗೆಯನ್ನು ಕಾಲ ಕಾಲಕ್ಕೆ ಮೇಲ್ವಿಚಾರಣೆ ಮಾಡಬೇಕು, ವಾರ್ಷಿಕ ಆಧಾರದ ಮತ್ತು ತ್ರೈಮಾಸಿಕ ಆಧಾರದ ಪ್ರಗತಿ ಮೇಲ್ವಿಚಾರಣೆ ಮಾಡಲು ಆಯಾ ಬ್ಯಾಂಕುಗಳ ಎಸ್ ಬಿ ಖಾತೆಗೆ ಔಪಚಾರಿಕ ಸಾಲ ಸೌಲಭ್ಯಗಳಿಗೆ ಕೆಸಿಸಿ ಸಂಪರ್ಕದ ದತ್ತಾಂಶ ಸಲ್ಲಿಸಬೇಕು ಎಂದು ಸೂಚಿಸಿದೆ.

**(ಕ್ರಮ: ಎಸ್‌ಎಲ್‌ಬಿಸಿ, ಎಲ್ಲಾ ಸದಸ್ಯ ಬ್ಯಾಂಕುಗಳು)**

**11.7: ಸ್ಥಳೀಯ ಭಾಷೆಯ ಬಳಕೆ-"ಸಖಿ ಶಕ್ತಿ" ವಿಶೇಷ ಕಾರ್ಯಾಗಾರ:**

ಪ್ರಾದೇಶಿಕ ಭಾಷೆಯ ಬಳಕೆಗೆ ಸಂಬಂಧಿಸಿದಂತೆ "ಬ್ಯಾಂಕ್‌ಗಳಲ್ಲಿ ಗ್ರಾಹಕ ಸೇವೆ" ಕುರಿತು ಉಪಪ್ರಧಾನ ವ್ಯವಸ್ಥಾಪಕರು 2015ರ ಮಾಸ್ಟರ್ ಸುತ್ತೋಲೆಯಲ್ಲಿ ಉಲ್ಲೇಖಿಸಿದ್ದಾರೆ. ಫಾರ್ಮ್‌ಗಳು, ಚಲನ್‌ಗಳು, ಚೆಕ್‌ಗಳು ಮತ್ತು ಸಾಲದ ಅರ್ಜಿ ನಮೂನೆಗಳಂತಹ ಮುದ್ರಿತ ಸಾಮಗ್ರಿಗಳಲ್ಲಿ ಕನ್ನಡ ಭಾಷೆ ಅಳವಡಿಸುವುದು ಅತ್ಯಗತ್ಯ, ಇದರಿಂದ ಸಾರ್ವಜನಿಕರಿಗೆ ವಿಶೇಷವಾಗಿ ಸ್ವಸಹಾಯ ಸಂಘಗಳು, ಗ್ರಾಮ ಪಂಚಾಯಿತಿ ಮಟ್ಟದ ಸ್ಥಳೀಯ ಸಂಸ್ಥೆಗಳು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಗುಡಿ ಕೈಗಾರಿಕೆಗಳು ಪ್ರಯೋಜನ ಪಡೆಯುತ್ತವೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 12**

**ಕಾರ್ಯಸೂಚಿ 12.1 ಅಗತ್ಯ ಹಣಕಾಸು ಮತ್ತು ತಾಂತ್ರಿಕ ಬೆಂಬಲ ಒದಗಿಸುವ ಮೂಲಕ ಆಹಾರ ಸಂಸ್ಕರಣಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ರೈತ ಉತ್ಪಾದಕ ಸಂಸ್ಥೆಗಳನ್ನು (ಎಫ್‌ಪಿಒ) ಪ್ರೋತ್ಸಾಹಿಸಿ.**

ರೈತ ಉತ್ಪಾದಕ ಸಂಸ್ಥೆ(ಎಫ್‌ಪಿಒ)ಗಳ ರಚನೆ ಮತ್ತು ಬೆಂಬಲದಲ್ಲಿ ನಬಾರ್ಡ್‌ನ ಉಪಕ್ರಮಗಳನ್ನು ಹಂಚಿಕೊಂಡ ನಬಾರ್ಡ್ ಮುಖ್ಯ ಜನರಲ್ ಮ್ಯಾನೇಜರ್, ರಾಜ್ಯದಲ್ಲಿ ಆಹಾರ ಸಂಸ್ಕರಣಾ ಚಟುವಟಿಕೆಗಳಿಗೆ ಅರ್ಹ ಎಫ್‌ಪಿಒಗಳಿಗೆ ಹಣಕಾಸು ಒದಗಿಸುವಂತೆ ಬ್ಯಾಂಕ್‌ಗಳಿಗೆ ಮನವಿ ಮಾಡಿದರು. ಕೃಷಿ ಮೌಲ್ಯ ಸರಪಳಿಯಲ್ಲಿ ರಾಜ್ಯದಲ್ಲಿ ಎಫ್‌ಪಿಒಗಳಿಗೆ ತಮ್ಮ ವ್ಯಾಪಾರ ಬೆಳವಣಿಗೆ, ಮೂಲಸೌಕರ್ಯ ಅಭಿವೃದ್ಧಿ ಇತ್ಯಾದಿಗಳಿಗೆ ಹಣಕಾಸು ಒದಗಿಸಲು ವ್ಯಾಪಕ ಅವಕಾಶವಿದೆ. ಆಹಾರ ಸಂಸ್ಕರಣೆ ಉದ್ಯಮದಲ್ಲಿ ತೊಡಗಿಸಿಕೊಳ್ಳುವಂತೆ ಅವುಗಳನ್ನು ಪ್ರೋತ್ಸಾಹಿಸಲು ಭಾರತ ಸರ್ಕಾರವು ಪ್ರಧಾನ ಮಂತ್ರಿಗಳ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಔಪಚಾರಿಕರಣ(ಪಿಎಂಎಫ್‌ಎಂಇ), ಕೃಷಿ ಮೂಲಸೌಕರ್ಯ ನಿಧಿ(ಎಐಎಫ್), ಪ್ರಧಾನ ಮಂತ್ರಿಗಳ ಕೃಷಿ ಸಿಂಚಯಿ ಯೋಜನೆಯಂತಹ ಹಲವಾರು ಯೋಜನೆಗಳನ್ನು ಪರಿಚಯಿಸಿದೆ. ನಬಾರ್ಡ್‌ನ ಅಂಗಸಂಸ್ಥೆಗಳಲ್ಲಿ ಒಂದಾದ ಎನ್‌ಎಬಿಸಂರಕ್ಷಣ್ ಮೂಲಕ ಎಫ್‌ಪಿಒಗಳಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆಯಡಿ ಮೇಲಾಧಾರ ಉಚಿತ ಸಾಲ ಒದಗಿಸುವ ಸಾಧ್ಯತೆಗಳನ್ನು ಬ್ಯಾಂಕ್‌ಗಳು ಅನ್ವೇಷಿಸಬಹುದು ಎಂದು ಅವರು ಮಾಹಿತಿ ಹಂಚಿಕೊಂಡರು.

---

**ಕಾರ್ಯಸೂಚಿ 12.2 ಎಲೆಕ್ಟ್ರಾನಿಕ್ ನೆಗೋಶಿಯೇಬಲ್ ವೇರ್‌ಹೌಸ್ ರಸೀದಿ(ಇ-ಎನ್‌ಡಬ್ಲ್ಯುಆರ್) ಮೂಲಕ ಕೃಷಿ ಸರಕುಗಳಿಗೆ ಅಡಮಾನ ಸಾಲ**

ಪಾರದರ್ಶಕ, ದಕ್ಷ ಮತ್ತು ಸುರಕ್ಷಿತ ವ್ಯವಸ್ಥೆ ಒದಗಿಸುವ ಮೂಲಕ ಎಲೆಕ್ಟ್ರಾನಿಕ್ ನೆಗೋಶಿಯೇಬಲ್ ವೇರ್‌ಹೌಸ್ ರಸೀದಿ(ಇ-ಎನ್‌ಡಬ್ಲ್ಯುಆರ್‌ಗಳು)ಗಳು ಕೃಷಿ ಗೋದಾಮು(ಉಗ್ರಾಣ) ಮತ್ತು ವ್ಯಾಪಾರ ವಲಯವನ್ನು ಪರಿವರ್ತಿಸಿವೆ ಎಂದು ನಬಾರ್ಡ್ ಮುಖ್ಯ ಜನರಲ್ ಮ್ಯಾನೇಜರ್ ಮಾಹಿತಿ ನೀಡಿದರು. ಇ-ಎನ್‌ಡಬ್ಲ್ಯುಆರ್ ರಶೀದಿಗಳು ಮಾಲೀಕತ್ವದ ಪುರಾವೆಯಾಗಿ ಕಾರ್ಯ ನಿರ್ವಹಿಸುತ್ತವೆ, ನಿಜವಾದ ಸರಕುಗಳನ್ನು ಚಲಿಸದೆಯೇ ಸಾಲಗಳಿಗೆ ವರ್ಗಾಯಿಸಬಹುದು, ವ್ಯಾಪಾರ ಮಾಡಬಹುದು ಅಥವಾ ಮೇಲಾಧಾರವಾಗಿ ಬಳಸಬಹುದು. ಇ-ಎನ್‌ಡಬ್ಲ್ಯೂಆರ್‌ಗಳ ವಿರುದ್ಧ ಹಣಕಾಸು ಉತ್ತೇಜಿಸಲು ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ(ಡಬ್ಲ್ಯುಡಿಆರ್‌ಎ)ವು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ, ವಿಶೇಷವಾಗಿ ಕೊಯ್ಲಿನ ನಂತರದ ಹಂತದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ನೆರವಾಗುತ್ತಿದೆ.

**ಕಾರ್ಯಸೂಚಿ 12.3 ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ 2025-26**

ಪ್ರತಿ ಜಿಲ್ಲೆಗೆ ಪ್ರತಿ ವರ್ಷ ಸಿದ್ಧಪಡಿಸಲಾಗುತ್ತಿರುವ ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ(ಪಿಎಲ್‌ಪಿ)ಯನ್ನು ಡಿಜಿಟಲೀಕರಣಗೊಳಿಸಲು ನಬಾರ್ಡ್ ಉಪಕ್ರಮ ಕೈಗೊಂಡಿದೆ ಮತ್ತು 2025-26ರ ಪಿಎಲ್‌ಪಿ ಯೋಜನೆಯು ಅಂತಿಮ ಹಂತದಲ್ಲಿದೆ ಎಂದು ನಬಾರ್ಡ್ ಮುಖ್ಯ ಜನರಲ್ ಮ್ಯಾನೇಜರ್ ಮಾಹಿತಿ ನೀಡಿದರು. ಮಾರ್ಗಸೂಚಿಗಳ ಪ್ರಕಾರ, ಬ್ಯಾಂಕ್ ಸಾಲಗಳಲ್ಲಿ ಎದುರಾಗುವ ಸಂಭಾವ್ಯ ಅಪಾಯಗಳನ್ನು ಸೆರೆಹಿಡಿಯುವ ಪಿಎಲ್‌ಪಿ ಮುನ್ಸೂಚನೆಗಳು ವಾರ್ಷಿಕ ಸಾಲ ಯೋಜನೆಯ ಪ್ರಕ್ಷೇಪಗಳೊಂದಿಗೆ ಸೇರಿಸುವುದು ಅಪೇಕ್ಷಣೀಯವಾಗಿದೆ. ಇದರಿಂದಾಗಿ, ಒಟ್ಟಾರೆ ರಾಜ್ಯಕ್ಕೆ ನಬಾರ್ಡ್ ಸಿದ್ಧಪಡಿಸಿರುವ ಸಾಲ ಹರಿವಿನ ರಾಜ್ಯ ಮಟ್ಟದ ಪ್ರಕ್ಷೇಪಣಗಳು ಸಹ ರಾಜ್ಯದ ಲೆಕ್ಕಪತ್ರಗಳಿಗೆ ಅನುಗುಣವಾಗಿರುತ್ತವೆ. ನಿರ್ಣಾಯಕ ದತ್ತಾಂಶಗಳ ಅಲಭ್ಯತೆ, ದತ್ತಾಂಶ ವರದಿಯ ಸಮಸ್ಯೆಗಳು, ಗುರಿಗಳ ಹಂಚಿಕೆ, ಹೈನುಗಾರಿಕೆ ಮತ್ತು ಮೀನುಗಾರಿಕೆ, ರಫ್ತು ಸಾಲ, ಶಿಕ್ಷಣ, ಸಾಮಾಜಿಕ ಮೂಲಸೌಕರ್ಯ ಸೇರಿದಂತೆ ಕೃಷಿ ಅವಧಿಯ ಸಾಲದ ಉಪ ವಲಯಗಳಿಗೆ ಸಂಬಂಧಿಸಿದಂತೆ ಸಾಧನೆಗಳ ಪರಾಮರ್ಶೆಯ ಸಮಸ್ಯೆಯನ್ನು ಅವರು ಪ್ರಸ್ತಾಪಿಸಿದರು. ಎಸ್‌ಎಲ್‌ಬಿಸಿ ಸಂಚಾಲಕರು ಮತ್ತು ಬ್ಯಾಂಕರ್‌ಗಳು ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಆರ್‌ಬಿಐ ಪ್ರಾದೇಶಿಕ ವ್ಯವಸ್ಥಾಪಕರು ಮಾತನಾಡಿ, ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ, ಆಯಾ ಜಿಲ್ಲೆಗಳ ವಾರ್ಷಿಕ ಸಾಲ ಯೋಜನೆಯನ್ನು ನಬಾರ್ಡ್ ಸಿದ್ಧಪಡಿಸಿದ ಪಿಎಲ್‌ಪಿಯೊಂದಿಗೆ ಸೇರಿಸಬೇಕು ಎಂದು ಸೂಚಿಸಿದರು.

**ಕಾರ್ಯಸೂಚಿ 12.4 ಕೃಷಿ ಮಾರುಕಟ್ಟೆ ಮೂಲಸೌಕರ್ಯ(ಎಎಂಐ) ಯೋಜನೆಯ ಮಾರ್ಗಸೂಚಿ ಪರಿಷ್ಕರಣೆ**

01.10.2024ರಂದು ಅಥವಾ ನಂತರ ಅವಧಿಯ ಸಾಲ ಮಂಜೂರು ಮಾಡುವ ಯೋಜನೆಗಳಿಗೆ ಪರಿಷ್ಕೃತ ಕಾರ್ಯಾಚರಣೆ ಮಾರ್ಗಸೂಚಿಗಳು ಅನ್ವಯವಾಗುತ್ತವೆ ಎಂದು ನಬಾರ್ಡ್ ಮುಖ್ಯ ಜನರಲ್ ಮ್ಯಾನೇಜರ್ ಮಾಹಿತಿ ನೀಡಿದರು. ಪರಿಷ್ಕೃತ ಮಾರ್ಗಸೂಚಿಗಳು ಅಸ್ತಿತ್ವದಲ್ಲಿರುವ ಕೆಲವು ನಿಬಂಧನೆಗಳ ಮಾರ್ಪಾಡು ಮತ್ತು ಹೊಸ ನಿಬಂಧನೆಗಳ ಪರಿಚಯವನ್ನು ಒಳಗೊಂಡಿವೆ. ಅದನ್ನು

ಎಲ್ಲಾ ಬ್ಯಾಂಕುಗಳು ಅನುಸರಿಸಬೇಕು ಮತ್ತು ಯೋಜನೆಯ ಅಡಿ, ಅರ್ಹ ತರಬೇತಿ ಪಡೆದವರಿಗೆ ಸಾಲ ಸೌಲಭ್ಯ ವಿಸ್ತರಿಸಬೇಕು ಎಂದು ಸೂಚಿಸಿದರು.

**ಕಾರ್ಯಸೂಚಿ 12.5 ಸರ್ಕಾರದ ಸಬ್ಸಿಡಿ ಯೋಜನೆ(ಜಿಎಸ್‌ಎಸ್) ಅಡಿ ಬಳಕೆಯ ಪ್ರಮಾಣಪತ್ರ ಸಲ್ಲಿಕೆ**

ಕೃಷಿ ಮಾರುಕಟ್ಟೆ ಮೂಲಸೌಕರ್ಯ(ಎಎಂಐ) ಮತ್ತು ಕೃಷಿ ಕ್ಲಿನಿಕ್ ಗಳು ಮತ್ತು ಕೃಷಿ ವ್ಯವಹಾರ ಕೇಂದ್ರ(ಎಸಿಎಬಿಸಿ)ಗಳ ಯೋಜನೆ ಸಂದರ್ಭದಲ್ಲಿ ನಬಾರ್ಡ್‌ನಿಂದ ಅಂತಿಮ ಸಬ್ಸಿಡಿ ಸ್ವೀಕರಿಸಿದ ನಂತರ ತಕ್ಷಣವೇ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸುವಂತೆ ಎಲ್ಲಾ ಬ್ಯಾಂಕ್‌ಗಳಿಗೆ ಸೂಚಿಸಲಾಗಿದೆ.

**ಕಾರ್ಯಸೂಚಿ 12.6 ಗ್ರಾಮೀಣ ಸಂಪರ್ಕಕ್ಕಾಗಿ ಹಣಕಾಸು ಸೇರ್ಪಡೆ ನಿಧಿ (ಎಫ್‌ಐಎಫ್) ಅಡಿ ಬೆಂಬಲ- ಎಚ್ ಟಿಎಸ್-ವಿಸ್ಯಾಟ್, ಡ್ಯುಯಲ್ ಎಲ್ ಟಿಇ ಮತ್ತು ಎಸ್ ಡಿ ವಾನ್ ತಂತ್ರಜ್ಞಾನಗಳು**

ನಬಾರ್ಡ್ ಮುಖ್ಯ ಜನರಲ್ ಮ್ಯಾನೇಜರ್ ಮಾಹಿತಿ ನೀಡಿ, ನೆಟ್‌ವರ್ಕ್ ಬೂದು ಪ್ರದೇಶಗಳಲ್ಲಿ ಸೌರ ಮತ್ತು ಸೌರೇತರ ಚಾಲಿತ ವಿಸ್ಯಾಟ್ ಗಳಿಗೆ ಬಂಡವಾಳ ವೆಚ್ಚ ಬೆಂಬಲದ ರೂಪದಲ್ಲಿ ಸಂಪರ್ಕ ಸುಧಾರಿಸಲು ನಬಾರ್ಡ್, ಹಣಕಾಸು ಸೇರ್ಪಡೆ ನಿಧಿ(ಎಫ್‌ಐಎಫ್) ಅಡಿ ಬೆಂಬಲ ಒದಗಿಸುತ್ತಿದೆ. ಒಪೆಕ್ಸ್ ಮತ್ತು ಕ್ಯಾಪೆಕ್ಸ್ ಎರಡನ್ನೂ ಒಳಗೊಂಡಿರುವ ಸೌಲಭ್ಯ ಪಡೆಯುವಂತೆ ಅವರು ಅರ್ಹ ಬ್ಯಾಂಕ್‌ಗಳಿಗೆ ಒತ್ತಾಯಿಸಿದರು.

**ಕಾರ್ಯಸೂಚಿ 12.7 ಹಣಕಾಸು ಸಾಕ್ಷರತೆ ಕೇಂದ್ರ (ಸಿಎಫ್‌ಎಲ್)**

ನಬಾರ್ಡ್ ಮುಖ್ಯ ಜನರಲ್ ಮ್ಯಾನೇಜರ್ ಮಾಹಿತಿ ನೀಡಿ, ಹಣಕಾಸು ಸಾಕ್ಷರತೆ ಕೇಂದ್ರ (ಸಿಎಫ್‌ಎಲ್)ನ ಹಂತ-3ರ ಅಡಿ, ಕರ್ನಾಟಕದಲ್ಲಿ 41 ಹೊಸ ಸಿಎಫ್‌ಎಲ್ ಗಳನ್ನು ಸ್ಥಾಪಿಸಲಾಗಿದೆ. ನಬಾರ್ಡ್‌ನ ಹಣಕಾಸು ಸೇರ್ಪಡೆ ನಿಧಿ(ಎಫ್‌ಐಎಫ್) ಅಡಿಯಲ್ಲಿ, ಇದಕ್ಕೆ 100% ಬಂಡವಾಳ ವೆಚ್ಚ ಮತ್ತು 90% ಕಾರ್ಯಾಚರಣೆ ವೆಚ್ಚ ಪೂರೈಸಲು ಪ್ರತಿ ಸಿಎಫ್‌ಎಲ್ ಗೆ ಒಟ್ಟು 29.30 ಲಕ್ಷ ರೂ. ಅನುದಾನ ಮಂಜೂರು ಮಾಡಲಾಗಿದೆ. ಆರಂಭದಲ್ಲಿ, ಪ್ರತಿ ಸಿಎಫ್‌ಎಲ್‌ಗೆ 5 ಲಕ್ಷ ರೂ. ಬಂಡವಾಳ ವೆಚ್ಚ ಬೆಂಬಲ ಮತ್ತು ಪ್ರತಿ ವರ್ಷಕ್ಕೆ ಸಿಎಫ್‌ಎಲ್‌ಗೆ 8.10 ಲಕ್ಷ ರೂ. ಕಾರ್ಯಾಚರಣೆ ವೆಚ್ಚದ ಬೆಂಬಲವನ್ನು 3 ವರ್ಷಗಳವರೆಗೆ(ಒಟ್ಟು ಕಾರ್ಯಾಚರಣೆ ವೆಚ್ಚದ 90%) ನಬಾರ್ಡ್‌ನ ಎಫ್‌ಐಎಫ್ ಅಡಿ, ಹಣ ನೀಡಲಾಗುತ್ತಿದೆ ಎಂದರು.

**ಕಾರ್ಯಸೂಚಿ 12.8 ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ(ಆರ್ ಐಡಿಎಫ್) ಅಡಿ ಕರ್ನಾಟಕ ಸರ್ಕಾರಕ್ಕೆ ಬೆಂಬಲ**

ನಬಾರ್ಡ್ ಸಿಜಿಎಂ ಮಾತನಾಡಿ, ಕರ್ನಾಟಕ ಸರ್ಕಾರವು ವಿವಿಧ ಕ್ಷೇತ್ರಗಳಲ್ಲಿ ಕೈಗೊಂಡಿರುವ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಯ ಪ್ರಯತ್ನಗಳಿಗೆ ನಬಾರ್ಡ್ ಸಕ್ರಿಯ ಬೆಂಬಲ ನೀಡುತ್ತಾ ಬಂದಿದೆ. ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಕರ್ನಾಟಕ ಸರ್ಕಾರದ ಮೊತ್ತದ ಗ್ರಾಮೀಣ ಮೂಲಸೌಕರ್ಯ ಪ್ರಸ್ತಾವನೆಗಳಿಗೆ ಇದುವರೆಗೆ 1,042 ಕೋಟಿ ರೂ. ಮಂಜೂರಾಗಿದೆ. ರಾಜ್ಯ ಸರ್ಕಾರಕ್ಕೆ ಒಟ್ಟು 20,978 ಕೋಟಿ ರೂ. ಮಂಜೂರಾಗಿದೆ. ಇದು ಗ್ರಾಮೀಣ ಸಂಪರ್ಕದಲ್ಲಿ ಗಮನಾರ್ಹ ಸುಧಾರಣೆ, ಸುಧಾರಿತ

ನೀರಾವರಿ ಸೌಲಭ್ಯಗಳು, ಗ್ರಾಮೀಣ ಜನರಿಗೆ ಉತ್ತಮ ಉದ್ಯೋಗಾವಕಾಶಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಪರಿಸ್ಥಿತಿಗಳಲ್ಲಿ ಸುಧಾರಣೆ ತಂದಿದೆ ಎಂದರು.

**ಕಾರ್ಯಸೂಚಿ ವಿಷಯ ಸಂಖ್ಯೆ - 13**

**ಸಾಮಾಜಿಕ ಭದ್ರತಾ ಯೋಜನೆಗಳ ಪ್ರಗತಿ:**

'ಪಿಎಂಜೆಜೆಬಿವೈ', 'ಪಿಎಂಎಸ್‌ಬಿವೈ' ಮತ್ತು 'ಎಪಿವೈ' ಯೋಜನೆಗಳ ಅಡಿಯಲ್ಲಿ ಕ್ರಮವಾಗಿ **175** ಲಕ್ಷ, **68** ಲಕ್ಷ ಮತ್ತು **37** ಲಕ್ಷ ಖಾತೆಗಳು ಬಾಕಿ ಉಳಿದಿವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಇದಲ್ಲದೆ, 'ಜನಸುರಕ್ಷಾ' ಯೋಜನೆಗಳ ವ್ಯಾಪ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಭಾರತ ಸರ್ಕಾರದ ಹಣಕಾಸು ಇಲಾಖೆಯು **15.10.2024** ರಿಂದ **15.01.2025**ರ ವರೆಗೆ ಎಲ್ಲಾ ಜಿಲ್ಲೆಗಳ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಪಿಎಂಜೆಜೆಬಿವೈ' ಮತ್ತು 'ಪಿಎಂಎಸ್‌ಬಿವೈ' ಯೋಜನೆಗಳ ಅಡಿಯಲ್ಲಿ ಮೂರು ತಿಂಗಳ ಪರಿಪೂರ್ಣ ಅನುಷ್ಠಾನ ಅಭಿಯಾನವನ್ನು ಪ್ರಾರಂಭಿಸಿದೆ ಎಂದು ಅವರು ಮಾಹಿತಿ ನೀಡಿದರು.

ಸರ್ಕಾರದ ಹಣಕಾಸು ಇಲಾಖೆಯ (ಹಣಕಾಸು ಸುಧಾರಣೆ) ಕಾರ್ಯದರ್ಶಿ ಡಾ. ವಿಶಾಲ್ ಆರ್ ಅವರು ಕುಸಿಯುತ್ತಿರುವ ಪ್ರವೃತ್ತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದರು. ನಿಗದಿಪಡಿಸಿದ ಗುರಿಯನ್ನು ಸಾಧಿಸಲು ಪ್ರತಿ ಬ್ಯಾಂಕ್ ವಾರಕ್ಕೆ ಪ್ರತಿ ಶಾಖೆಗೆ **10** ರಂತೆ ಅನುಷ್ಠಾನ ಮಾಡಬೇಕು ಎಂದು ಅವರು ಮಾಹಿತಿ ನೀಡಿದರು. ಜೊತೆಗೆ, 'ಗೃಹಲಕ್ಷ್ಮಿ' ಯೋಜನೆಯ ಫಲಾನುಭವಿಗಳನ್ನು ಸಾಮಾಜಿಕ ಭದ್ರತಾ ಯೋಜನೆಗಳ ವ್ಯಾಪ್ತಿಗೆ ತರಲು ಎಲ್ಲಾ ಬ್ಯಾಂಕ್‌ಗಳನ್ನು ಕೋರಲಾಗಿದೆ.

ಸದಸ್ಯ ಬ್ಯಾಂಕುಗಳಿಗೆ ಸಲ್ಲಿಸುವ ಸಲುವಾಗಿ 'ಎಸ್‌ಎಲ್‌ಬಿಸಿ'ಗೆ ಉದ್ದೇಶಿತ ಪಟ್ಟಿಯನ್ನು ಒದಗಿಸುವಂತೆ ಕೆನರಾ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕರು ಸರ್ಕಾರವನ್ನು ವಿನಂತಿಸಿದರು. ಅಲ್ಲದೆ, ಸಾಮಾಜಿಕ ಭದ್ರತಾ ಯೋಜನೆಗಳಲ್ಲಿನ ನಕಾರಾತ್ಮಕ ಪ್ರವೃತ್ತಿಯನ್ನು ಆದ್ಯತೆಯ ಮೇರೆಗೆ ಪರಿಹರಿಸುವಂತೆ ಅವರು ಬ್ಯಾಂಕರ್‌ಳಿಗೆ ಸಲಹೆ ನೀಡಿದರು.

(**ಕ್ರಮ**: **ಎಲ್ಲಾ ಎಲ್‌ಡಿಎಂಎಸ್ ಮತ್ತು ಬ್ಯಾಂಕುಗಳು**)

**ಕಾರ್ಯಸೂಚಿ ವಿಷಯ ಸಂಖ್ಯೆ** – 14

**ಪಿಎಂ ಸ್ವನಿಧಿ ಯೋಜನೆ**:

'ಪಿಎಂಸ್ವನಿಧಿ' ಸಾಲ ಮಂಜೂರಾತಿಯಲ್ಲಿ ಕರ್ನಾಟಕ ರಾಜ್ಯವು **4**ನೇ ಸ್ಥಾನದಲ್ಲಿದ್ದು, ನಂ.**1** ಸ್ಥಾನವನ್ನು ಮರಳಿ ಪಡೆಯಲು ಶ್ರಮಿಸುತ್ತಿದೆ ಎಂದು ಉಪಸಂಚಾಲಕರು ಮಾಹಿತಿ ನೀಡಿದರು.

'ಪಿಎಂ ಸ್ವನಿಧಿ' ಯೋಜನೆಯಡಿ ಕರ್ನಾಟಕ ರಾಜ್ಯವು **5,48,379** ಅರ್ಜಿಗಳಿಗೆ ಸಾಲ ಮಂಜೂರು ಮಾಡಿದೆ ಮತ್ತು **5,21,649** ಅರ್ಜಿಗಳ ಅಡಿ ಸಾಲ ವಿತರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

ಅಖಿಲ ಭಾರತ ಮಟ್ಟದಲ್ಲಿ ರಾಜ್ಯದ ಸ್ಥಾನವನ್ನು ಸುಧಾರಿಸಿದ್ದಕ್ಕಾಗಿ ಕರ್ನಾಟಕದ ಸರ್ಕಾರದ ಎಸಿಎಸ್ ಮತ್ತು ಡಿಸಿ ಅವರು ಎಲ್ಲಾ ಬ್ಯಾಂಕರ್‌ಗಳನ್ನು ಅಭಿನಂದಿಸಿದರು. ಆದಾಗ್ಯೂ, ಅಖಿಲ ಭಾರತ ಮಟ್ಟದಲ್ಲಿ 'ಪಿಎಂ ಸ್ವನಿಧಿ' ಯೋಜನೆಯಡಿ ನಂ.1 ಸ್ಥಾನವನ್ನು ಸಾಧಿಸಲು ಅವರು ಎಲ್ಲಾ ಬ್ಯಾಂಕರ್‌ಗಳಿಗೆ ಸಲಹೆ ನೀಡಿದರು. ವಿತರಣೆಯ ಅಡಿಯಲ್ಲಿ ಮುಕ್ತಾಯದ ಸಮಯವನ್ನು ಕಡಿಮೆ ಮಾಡಲು ಅವರು ಬ್ಯಾಂಕರ್‌ಗಳಿಗೆ ಸೂಚನೆ ನೀಡಿದರು.

'ಪಿಎಂ ಸ್ವನಿಧಿ' ಅಡಿಯಲ್ಲಿ 'ಕರ್ನಾಟಕ ಬ್ಯಾಂಕ್'ನ ಕಾರ್ಯಕ್ಷಮತೆಯ ಬಗ್ಗೆ ಎಸಿಎಸ್ ಮತ್ತು ಡಿಸಿ ಅವರು ಅಸಮಾಧಾನ ವ್ಯಕ್ತಪಡಿಸಿದರು ಮತ್ತು ಬಾಕಿ ಇರುವ ಅರ್ಜಿಗಳನ್ನು ತಕ್ಷಣ ವಿಲೇವಾರಿ ಮಾಡಲು ಸೂಚನೆ ನೀಡಿದರು.

(**ಕ್ರಮ**: **ಎನ್‌ಯುಎಲ್‌ಎಂ**, **ಕರ್ನಾಟಕದ ಸರ್ಕಾರ**, **ಕರ್ನಾಟಕ ಬ್ಯಾಂಕ್**, **ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು**)

**ಕಾರ್ಯಸೂಚಿ ವಿಷಯ ಸಂಖ್ಯೆ** - 15

**ಡಿಜಿಟಲ್ ಪಾವತಿ ಪರಿಸರ ವ್ಯವಸ್ಥೆಯ ವಿಸ್ತರಣೆ ಮತ್ತು ವ್ಯಾಪ್ತಿ ಹೆಚ್ಚಳ**:

**31.08.2024**ರ ಹೊತ್ತಿಗೆ ಕರ್ನಾಟಕ ರಾಜ್ಯವು ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿ **100%** ಡಿಜಿಟಲೀಕರಣವನ್ನು ಸಾಧಿಸಿದ. ನಿಮ್ಮ ಅದ್ಭುತ ಕಾರ್ಯಕ್ಷಮತೆಗಾಗಿ ನಾವು ಎಲ್ಲಾ ಸದಸ್ಯ ಬ್ಯಾಂಕುಗಳನ್ನು ಅಭಿನಂದಿಸುತ್ತೇವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**01.04.2023**ರ ನಂತರ ತೆರೆಯಲಾದ ಖಾತೆಗಳು ಕನಿಷ್ಠ ಯಾವುದಾದರೂ ಒಂದು ಡಿಜಿಟಲ್ ಉತ್ಪನ್ನವನ್ನಾದರೂ ಹೊಂದಿರುವಂತೆ ಖಾತರಿಪಡಿಸಲು ಎಲ್ಲಾ ಸದಸ್ಯ ಬ್ಯಾಂಕುಗಳನ್ನು 'ಎಸ್‌ಎಲ್‌ಬಿಸಿ' ವಿನಂತಿಸಿದೆ.

ಅನುಮತಿಯೊಂದಿಗೆ ಕಾರ್ಯಸೂಚಿಯನ್ನು ಮುಗಿಸುತ್ತಿದ್ದೇವೆ, ಯಾವುದೇ ಉಳಿಕೆ ವಿಷಯವನ್ನು ಉಪಸಮಿತಿಯ ಮುಂದೆ ಇರಿಸಲಾಗುವುದು.

**ಕಾರ್ಯಸೂಚಿ ವಿಷಯ ಸಂಖ್ಯೆ** - 16

**ವ್ಯವಹಾರ ಪ್ರತಿನಿಧಿಗಳ ಕಾರ್ಯನಿರ್ವಹಣೆ** (**ವ್ಯವಹಾರ ಪ್ರತಿನಿಧಿಗಳಿಗೆ ಸಂಬಂಧಿಸಿದ ಅಡೆತಡೆಗಳು**/**ಸಮಸ್ಯೆಗಳ ಪರಿಶೀಲನೆ**):

ಹೆಚ್ಚಿನ ನಿಷ್ಕ್ರಿಯ ವ್ಯವಹಾರ ಪ್ರತಿನಿಧಿಗಳು**(**ಬಿಸಿ**)** **'**ಫಿನೋ ಪೇಮೆಂಟ್ಸ್ ಬ್ಯಾಂಕ್**'** (14580), ಏರ್ಟೆಲ್ ಪೇಮೆಂಟ್ಸ್ ಬ್ಯಾಂಕ್ (2784), ಆಕ್ಸಿಸ್ ಬ್ಯಾಂಕ್ (1160), ಕೆನರಾ ಬ್ಯಾಂಕ್ (963), ಯೆಸ್ ಬ್ಯಾಂಕ್ (378) ಹಾಗೂ 'ಬ್ಯಾಂಕ್ ಆಫ್ ಬರೋಡಾ'ಗೆ(321) ಸೇರಿದವರು ಎಂದು 'ಎಸ್‌ಎಲ್‌ಬಿಸಿ' ಸಂಚಾಲಕರು ಮಾಹಿತಿ ನೀಡಿದರು

ನಿಷ್ಕ್ರಿಯ ವ್ಯವಹಾರ ಪ್ರತಿನಿಧಗಳ ಸಂಖ್ಯೆಯಲ್ಲಿ ಹೆಚ್ಚಳದ ಬಗ್ಗೆ ಕರ್ನಾಟಕದ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

4435 ಮ ಮಂದಿ 'ಐಐಬಿಎಫ್' ಪ್ರಮಾಣೀಕೃತ 'ಬಿಸಿ ಸಖಿ'ಯರನ್ನು ನೇಮಿಸಿಕೊಳ್ಳುವಂತೆ ಎಸಿಎಸ್ & ಡಿಸಿ ಅವರು ಬ್ಯಾಂಕುಗಳಿಗೆ ಸಲಹೆ ನೀಡಿದರು. ಜೊತೆಗೆ, ನಿಷ್ಕ್ರಿಯ ವ್ಯವಹಾರ ಪ್ರತಿನಿಧಿಗಳ

ಸಂಖ್ಯೆಯನ್ನು ಕಡಿಮೆ ಮಾಡಲು 'ಫಿನೋ ಪೇಮೆಂಟ್ಸ್ ಬ್ಯಾಂಕ್' ಹೊಂದಿರುವ ಕ್ರಿಯಾ ಯೋಜನೆಯನ್ನು ಸಲ್ಲಿಸುವಂತೆ 'ಎಲ್‌ಎಲ್ ಬಿಸಿ'ಯನ್ನು ವಿನಂತಿಸಿದರು.

ಎಲ್ಲಾ ಬ್ಯಾಂಕುಗಳು ತಮ್ಮ ಒಟ್ಟು 'ಬಿಸಿ'ಗಳ **10%** ಅನ್ನು ನೇಮಕ ಮಾಡಿಕೊಳ್ಳಲು ಅಧ್ಯಕ್ಷರು ಸೂಚನೆ ನೀಡಿದರು, ಇದರಿಂದ ಎಲ್ಲಾ 'ಬಿ.ಸಿ ಸಖಿ'ಯರನ್ನು ಸೇರ್ಪಡೆಗೊಳಿಸಿಕೊಂಡಂತಾಗುತ್ತದೆ ಎಂದು ಸಲಹೆ ನೀಡಿದರು.

(**ಕ್ರಮ**: **ಕೆನರಾ ಬ್ಯಾಂಕ್**, **ಎಸ್‌ಬಿಐ**, **ಯುಬಿಐ**, **ಬಿಒಬಿ**, **ಬಿಒಐ**, **ಇಂಡಿಯನ್ ಬ್ಯಾಂಕ್**, **ಪಿಎನ್‌ಬಿ**, **ಯುಕೋ**, **ಕರ್ನಾಟಕ ಬ್ಯಾಂಕ್**, **ಎಚ್‌ಡಿಎಫ್‌ಸಿ**, **ಆಕ್ಸಿಸ್ ಬ್ಯಾಂಕ್**, **ಯೆಸ್ ಬ್ಯಾಂಕ್**, **ಐಡಿಎಫ್‌ಸಿ**, **ಏರ್ಟೆಲ್ ಪೇಮೆಂಟ್ ಬ್ಯಾಂಕ್ ಮತ್ತು ಫಿನೋ ಪೇಮೆಂಟ್ ಬ್ಯಾಂಕ್**)

**ಕಾರ್ಯಸೂಚಿ ವಿಷಯ ಸಂಖ್ಯೆ** - 17

**ಆರ್ಥಿಕ ಸಾಕ್ಷರತಾ ಶಿಬಿರಗಳ ಪರಿಶೀಲನೆ**:

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ **(17)**, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ **(8)**, ಬ್ಯಾಂಕ್ ಆಫ್ ಬರೋಡಾ **(1)**, ಕೆಜಿಬಿ **(1)** ಮತ್ತು ಬ್ಯಾಂಕ್ ಆಫ್ ಇಂಡಿಯಾ **(1) 30.09.2024** ರವರೆಗೆ ಕಾರ್ಯನಿರ್ವಹಿಸದ 'ಎಫ್‌ಎಲ್‌ಸಿ'ಗಳನ್ನು ಹೊಂದಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಪಂಚಾಯತ್ ಗ್ರಂಥಾಲಯಗಳಲ್ಲಿ **5** ಲಕ್ಷ ಸ್ವಸಹಾಯ ಗುಂಪಿನ ಮಹಿಳೆಯರಿಗೆ **10** ಮಾಡ್ಯೂಲ್‌ಳ **5** ಗಂಟೆಗಳ ಅವಧಿಯ ಡಿಜಿಟಲ್ ಸಾಕ್ಷರತಾ ತರಬೇತಿಯನ್ನು 'ಎನ್‌ಎಲ್‌ಎಂ' ಇಲಾಖೆ ನಡೆಸುತ್ತಿದೆ ಎಂದು ಎಸಿಎಸ್ ಮತ್ತು ಡಿಸಿ ಅವರು ಸದನಕ್ಕೆ ಮಾಹಿತಿ ನೀಡಿದರು. ಅಲ್ಲದೆ, ಈ ಸಂಖ್ಯೆಯನ್ನು ಹೆಚ್ಚಿಸುವ ಸಲುವಾಗಿ ಬಹುಪರಿಣಾಮಕಾರಿ ಯೋಜನೆಯನ್ನು ಜಾರಿಗೊಳಿಸಲು 'ಎನ್‌ಎಲ್‌ಎಂ'ನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಕರ್ನಾಟಕದ ಸರ್ಕಾರದ ಪಂಚಾಯತ್ ರಾಜ್ ಇಲಾಖೆ ಆಯುಕ್ತರ ಜೊತೆ ಚರ್ಚಿಸುವಂತೆ 'ಎಸ್‌ಎಲ್‌ಬಿಸಿ' ಮತ್ತು ಬ್ಯಾಂಕರ್‌ಗಳನ್ನು ಎಸಿಎಸ್ ಮತ್ತು ಡಿಸಿ ಅವರು ವಿನಂತಿಸಿದರು.

(**ಕ್ರಮ**: **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ**, **ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ**, **ಬ್ಯಾಂಕ್ ಆಫ್ ಬರೋಡಾ**, **ಬ್ಯಾಂಕ್ ಆಫ್ ಇಂಡಿಯಾ**)

**ಕಾರ್ಯಸೂಚಿ ವಿಷಯ ಸಂಖ್ಯೆ** 18

**ಹಣಕಾಸು ಸಾಕ್ಷರತಾ ಕೇಂದ್ರಗಳು** (**ಸಿಎಫ್‌ಎಲ್**):

ಕರ್ನಾಟಕ ರಾಜ್ಯದಲ್ಲಿ ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬ್ಯಾಂಕ್ ಆಫ್ ಬರೋಡಾ ಬ್ಯಾಂಕ್‌ಗಳದ್ದು ಸೇರಿದಂತೆ 79 ಹಣಕಾಸು ಸಾಕ್ಷರತಾ ಕೇಂದ್ರ(ಸಿಎಫ್‌ಎಲ್)ಗಳಿವೆ.

ತ್ರೈಮಾಸಿಕದಲ್ಲಿ ನಡೆಸಿದ ಒಟ್ಟು ಶಿಬಿರಗಳ ಸಂಖ್ಯೆ 11707 ಮತ್ತು ಭಾಗವಹಿಸಿದವರ ಸಂಖ್ಯೆ 4,34,664.

---

**ಕಾರ್ಯಸೂಚಿ ವಿಷಯ ಸಂಖ್ಯೆ** - 19

'**ಉದ್ದೇಶಿತ ಹಣಕಾಸು ಸೇರ್ಪಡೆ ಮಧ್ಯಸ್ಥಿಕೆ ಕಾರ್ಯಕ್ರಮ**'**ಕ್ಕಾಗಿ**(**ಟಿಎಫ್ಐಐಪಿ**) **ರಾಜ್ಯ ಮಟ್ಟದ ಅನುಷ್ಠಾನ ಸಮಿತಿ**:

ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳು 'ಪಿಎಂಜೆಜೆಬಿವೈ' ಮತ್ತು 'ಎಪಿವೈ' ಗುರಿಗಳನ್ನು ಸಾಧಿಸಿವೆ ಹಾಗೂ 'ಪಿಎಂಎಸ್‌ಬಿವೈ' ಮತ್ತು 'ಸಿಎಎಸ್ಎ' ಅಡಿಯಲ್ಲಿ ಗುರಿಗಳನ್ನು ಸಾಧಿಸಲಾಗಿಲ್ಲ ಎಂದು ಉಪ ಸಂಚಾಲಕರು ಮಾಹಿತಿ ನೀಡಿದರು.

ಇದಲ್ಲದೆ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 'ಪಿಎಂಎಸ್‌ಬಿವೈ' ಮತ್ತು 'ಸಿಎಎಸ್ಎ' ಅಡಿಯಲ್ಲಿ ನಿಗದಿಪಡಿಸಿದ ಗುರಿಗಳನ್ನು ಸಾಧಿಸುವಂತೆ ಅವರು ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ವಿನಂತಿಸಿದರು.

(**ಕ್ರಮ**: **ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ ಸದಸ್ಯ ಬ್ಯಾಂಕುಗಳು**, **ಎಲ್‌ಡಿಎಂ**)

**ಕಾರ್ಯಸೂಚಿ ವಿಷಯ ಸಂಖ್ಯೆ – 20**

**ಕೆಸಿಸಿ ಸಾಲಗಳು** - **ವಿತರಣೆಗಳು ಮತ್ತು ಬಾಕಿ**:

ಸೆಪ್ಟೆಂಬರ್ **2024**ರವರೆಗೆ 'ಕೆಸಿಸಿ' ಸಾಲಗಳ ಸಾಧನೆಯಡಿ ಬಾಕಿ ಇರುವ ಒಟ್ಟು ಮೊತ್ತ **68457** ಕೋಟಿ ರೂ. ಆಗಿದೆ ಎಂದು ಎಸ್‌ಎಲ್‌ಬಿಸಿ ಸಂಚಾಲಕರು ಮಾಹಿತಿ ನೀಡಿದರು. ಇದೇ ವೇಳೆ, ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗಾಗಿ ಎಲ್ಲಾ ಅರ್ಹ ರೈತರಿಗೆ 'ಕೆಸಿಸಿ' ಸಾಲಗಳನ್ನು ಮಂಜೂರು ಮಾಡುವಂತೆ 'ಎಸ್‌ಎಲ್‌ಬಿಸಿ' ಸಂಚಾಲಕರು ಎಲ್ಲಾ ಸದಸ್ಯ ಬ್ಯಾಂಕುಗಳನ್ನು ವಿನಂತಿಸಿದರು.

(**ಕ್ರಮ**: **ಎಲ್ಲಾ ಸದಸ್ಯ ಬ್ಯಾಂಕ್‌ಗಳು**)

**ಕೆಸಿಸಿ**-**ಹೈನುಗಾರಿಕೆ ಮತ್ತು ಇತರ ಪಶುಸಂಗೋಪನಾ ಚಟುವಟಿಕೆಗಳು**:

ಬ್ಯಾಂಕುಗಳು 133.86 ಕೋಟಿ ರೂ.ಗಳ ಮೌಲ್ಯದ 18011 ಕೆಸಿಸಿ ಎಎಚ್ ಸಾಲಗಳನ್ನು ಮಂಜೂರು ಮಾಡಿವೆ ಎಂದು 'ಎಸ್‌ಎಲ್‌ಬಿಸಿ' ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಬ್ಯಾಂಕುಗಳು 85.06 ಕೋಟಿ ರೂ.ಗಳ 3566 ಕೆಸಿಸಿ ಮೀನುಗಾರಿಕೆ ಸಾಲಗಳನ್ನು ಮಂಜೂರು ಮಾಡಿವೆ ಎಂದು 'ಎಸ್‌ಎಲ್‌ಬಿಸಿ' ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು

ಹೆಚ್ಚಿನ ಸಂಖ್ಯೆಯ ಅರ್ಜಿಗಳನ್ನು ಪಡೆಯಲು ಅಧ್ಯಕ್ಷರು 'ಕೆಎಂಎಫ್'ಗೆ ಸೂಚನೆ ನೀಡಿದರು.

(**ಕ್ರಮ**: **ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಕರ್ನಾಟಕದ ಸರ್ಕಾರದ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ**)

**ಕಾರ್ಯಸೂಚಿ ವಿಷಯ ಸಂಖ್ಯೆ - 21**

**ಕೃಷಿ ಇಲಾಖೆ ಮತ್ತು ರೈತ ಕಲ್ಯಾಣ ಯೋಜನೆಗಳು:**

**21.1: ಕೃಷಿ ಮೂಲಸೌಕರ್ಯ ನಿಧಿ (ಎಐಎಫ್):**

ಕರ್ನಾಟಕ ರಾಜ್ಯವು ವಿತರಣೆಯಲ್ಲಿ 5ನೇ ಸ್ಥಾನದಲ್ಲಿದೆ ಮತ್ತು ಅಖಿಲ ಭಾರತ (ಪ್ಯಾನ್ ಇಂಡಿಯಾ) ಆಧಾರದ ಮೇಲೆ ಮಂಜೂರಾತಿಯಲ್ಲಿ 6ನೇ ಸ್ಥಾನದಲ್ಲಿದೆ ಎಂದು ಸಂಚಾಲಕರು ಮಾಹಿತಿ ನೀಡಿದರು.

2024-25ರ ಹಣಕಾಸು ವರ್ಷದಲ್ಲಿ ಬ್ಯಾಂಕುಗಳು 539 ಕೋಟಿ ಮೊತ್ತದ **435 ಖಾತೆಗಳನ್ನು** ಮಂಜೂರು ಮಾಡಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಇದಲ್ಲದೆ, ಮಂಜೂರಾತಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರ ಇತ್ಯರ್ಥಗೊಳಿಸಿ, ಹಣವನ್ನು ವಿತರಿಸುವಂತೆ ಅವರು ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಸೂಚನೆ ನೀಡಿದರು. ಬಾಕಿ ಇರುವ ಮತ್ತು ಹಾಲಿ ಕೈಯಲ್ಲಿರುವ ಎಲ್ಲಾ ಅರ್ಜಿಗಳಿಗೆ ಬ್ಯಾಂಕುಗಳು 'ಕೃಷಿ ಮ್ಯಾಪರ್' ತಂತ್ರಾಂಶವನ್ನು ಬಳಸಿ 'ಜಿಯೋ ಟ್ಯಾಗಿಂಗ್' ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಸರ್ಕಾರಿ ಪ್ರಾಯೋಜಿತ ಯೋಜನೆಗಳಿಗೆ ವಯೋಮಾನದ ಆಧರಿತವಾಗಿ ಬಾಕಿ ವಿವರಗಳನ್ನು ಒದಗಿಸುವಂತೆ ಎಸಿಎಸ್ ಮತ್ತು ಡಿಸಿ ಅವರು 'ಎಸ್‌ಎಲ್‌ಬಿಸಿ'ಗೆ ಸೂಚನೆ ನೀಡಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಸ್‌ಎಲ್‌ಬಿಸಿ)**

**21.2: ವಿದ್ಯುನ್ಮಾನ ವರ್ಗಾಯಿಸಬಹುದಾದ ಗೋದಾಮು ರಸೀದಿ (ಇ-ಎನ್‌ಡಬ್ಲ್ಯೂಆರ್) ಮೂಲಕ ಕೃಷಿ ಸರಕುಗಳಿಗೆ ಅಡಮಾನ ಹಣಕಾಸು:**

30.09.2024 ರವರೆಗೆ ಬ್ಯಾಂಕುಗಳು 704 ಕೋಟಿ ರೂ.ಗಳ 2455 ಸಾಲಗಳನ್ನು ಬಾಕಿ ಉಳಿಸಿಕೊಂಡಿವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**21.3: 'ಪಶು ಮೂಲಸೌಕರ್ಯ ಅಭಿವೃದ್ಧಿ ನಿಧಿ' ಅಡಿ ಪಶುಸಂಗೋಪನೆ ಅಡಿಯಲ್ಲಿ ಕಾರ್ಯಕ್ಷಮತೆ:**

'ಅತ್ಮನಿರ್ಭರ ಭಾರತ್' ಪ್ಯಾಕೇಜ್ ಅಡಿಯಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದೆ ಎಂದು ಉಪ ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು. ಶಾಖಾ ಮಟ್ಟದಲ್ಲಿ ಯೋಜನೆಯನ್ನು ಪ್ರಚಾರ ಮಾಡುವಂತೆ ಅವರು ಎಲ್ಲಾ ಬ್ಯಾಂಕುಗಳಿಗೆ ಸಲಹೆ ನೀಡಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕುಗಳು)**

**21.4: ರೈತ ಉತ್ಪಾದಕ ಕಂಪನಿಗಳು / ರೈತ ಉತ್ಪಾದಕ ಸಂಸ್ಥೆಗಳಿಗೆ ಹಣಕಾಸು:**

30.09.2024 ರವರೆಗೆ ಬ್ಯಾಂಕುಗಳು 8.19 ಕೋಟಿ ರೂ.ಗಳ 45 ಸಾಲಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**21.5: ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (ಪಿಎಂಎಫ್‌ಬಿವೈ):**

'ಎನ್‌ಪಿಸಿಐ' ಪಾವತಿ ವೈಫಲ್ಯ ಮತ್ತು ವಿವಿಧ ಸದಸ್ಯ ಬ್ಯಾಂಕುಗಳಿಂದ ಖಾಲಿ ಆಧಾರ್ ಕಾರಣದಿಂದಾಗಿ 'ಪಿಎಂಎಫ್‌ಬಿವೈ' ಅಡಿಯಲ್ಲಿ 2.62 ಕೋಟಿ ರೂ.ಗಳ 1755 ಪ್ರಸ್ತಾಪಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಖಾಲಿ ಆಧಾರ್ ನಿಂದಾಗಿ 'ಎನ್‌ಪಿಸಿಐ' ವೈಫಲ್ಯ ಪ್ರಕರಣಗಳ ಅಂಕಿ-ಅಂಶಗಳ ಬಗ್ಗೆ ತಮಗೆ ತಿಳಿದಿದೆ ಎಂದು ಐಸಿಐಸಿಐ ಬ್ಯಾಂಕಿನ ಅಧಿಕಾರಿಯೊಬ್ಬರು ಸದನಕ್ಕೆ ಮಾಹಿತಿ ನೀಡಿದರು. ಎಲ್ಲಾ ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

31.12.2024ರ ಒಳಗಾಗಿ ಬಾಕಿ ಇರುವ ಹಣವನ್ನು ಪಾವತಿಸುವಂತೆ ಎಸಿಎಸ್ ಮತ್ತು ಡಿಸಿ ಅವರು ಐಸಿಐಸಿಐ ಬ್ಯಾಂಕ್‌ಗೆ ಸೂಚನೆ ನೀಡಿದರು.

**(ಕ್ರಮಗಳು: ಐಸಿಐಸಿಐ ಬ್ಯಾಂಕ್)**

**21.6: ಪುನರ್‌ರಚಿತ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ:**

ಇಲಾಖೆಯಿಂದ ದತ್ತಾಂಶವನ್ನು ಸ್ವೀಕರಿಸಲಾಗಿಲ್ಲ.

**ಕಾರ್ಯಸೂಚಿ ವಿಷಯ ಸಂಖ್ಯೆ - 22**

**ಪಿಎಂಎವೈ-ಯು: ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್:**

ಕೇವಲ 3390 ಮನೆಗಳು ಮಾತ್ರ ಸಿದ್ಧವಾಗಿವೆ, ಪೂರ್ಣಗೊಳ್ಳುವ ಹಂತದಲ್ಲಿವೆ ಮತ್ತು ಅವುಗಳಿಗೆ ಮಾತ್ರ ಆದ್ಯತೆ ನೀಡಬೇಕಾಗಿದೆ ಎಂದು ಇಲಾಖೆ ದೃಢಪಡಿಸಿದೆ ಮತ್ತು ಆದ್ದರಿಂದ ಬ್ಯಾಂಕುಗಳು ಆ ಮನೆಗಳಿಗೆ ಮಾತ್ರ ಹಣಕಾಸು ಒದಗಿಸಲು ಸಾಧ್ಯವಾಗುತ್ತದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಸದಸ್ಯ ಬ್ಯಾಂಕುಗಳಿಗೆ ಸಲ್ಲಿಸಲು ಸಂಪೂರ್ಣ ಅರ್ಹ ಫಲಾನುಭವಿಗಳನ್ನು ಒದಗಿಸುವಂತೆ ಎಸ್ ಎಲ್ ಬಿಸಿ ಇಲಾಖೆಯನ್ನು ವಿನಂತಿಸಿತು.

**(ಕ್ರಮ: ಆರ್‌ಜಿಎಚ್‌ಸಿಎಲ್ ಇಲಾಖೆ, ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ - 23**

**ಸರ್ಕಾರಿ ಪ್ರಾಯೋಜಿತ ಯೋಜನೆಗಳು ಮತ್ತು ಸರ್ಕಾರಿ ಪ್ರಾಯೋಜಿತ ಉಪಕ್ರಮಗಳಿಗೆ (ಡಿಎವೈ-ಎನ್‌ಆರ್‌ಎಲ್‌ಎಂ, ಡಿಎವೈ-ಎನ್‌ಯುಎಲ್‌ಎಂ, ಮುದ್ರಾ, ಸ್ಟ್ಯಾಂಡ್ ಅಪ್ ಇಂಡಿಯಾ, ಇತ್ಯಾದಿ) ಸಾಲ ನೀಡುವ ಬಗ್ಗೆ ಚರ್ಚೆ ಮತ್ತು ಈ ಯೋಜನೆಗಳ ಪರಿಣಾಮ.**

**23.1: 30.09.2024 ರಂದು ಇದ್ದಂತೆ 'ಪಿಎಂಇಜಿಪಿ' ಕಾರ್ಯಕ್ಷಮತೆ:**

'ಪಿಎಂಇಜಿಪಿ' ಯೋಜನೆಯಡಿ ಬಾಕಿ ಇರುವ ಅರ್ಜಿಗಳನ್ನು ತೆರವುಗೊಳಿಸಬೇಕು, ಇದು ರಾಜ್ಯದ ನಿರುದ್ಯೋಗಿ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ ಎಂದು ಸಂಚಾಲಕರು ಸದಸ್ಯ ಬ್ಯಾಂಕುಗಳನ್ನು ವಿನಂತಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**23.2 ಅಲ್ಪಸಂಖ್ಯಾತ ಸಮುದಾಯಗಳಿಗೆ ಸಾಲದ ಹರಿವು:**

**ಕಾರ್ಯಸೂಚಿ 23.2.1: ರಾಜ್ಯದ ಅಲ್ಪಸಂಖ್ಯಾತ ಸಮುದಾಯಗಳಿಗೆ ಹಣಕಾಸು ಅಡಿಯಲ್ಲಿ ಪ್ರಗತಿ:**

30.09.2024**ರ** ವೇಳೆಗೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಬಾಕಿ ಇರುವ ಸಾಲದ ಮೊತ್ತ 49609 ಕೋಟಿ ರೂ**.** ಆಗಿದ್ದು**,** ಇದು ಒಟ್ಟು **'**ಪಿಎಸ್‌ಎ'ದ ಶೇ**. 11**ರಷ್ಟು ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು**.**

ಬ್ಯಾಂಕುಗಳು ತಮ್ಮ 'ಎಸಿಪಿ' ಗುರಿಯ ಭಾಗವಾಗಿ, ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತ ಸಮುದಾಯಕ್ಕೆ ಗರಿಷ್ಠ ಸಾಲಗಳನ್ನು ಮಂಜೂರು ಮಾಡುವ ಮೂಲಕ 2024-25ನೇ ಸಾಲಿನ ಹಣಕಾಸು ವರ್ಷದಲ್ಲಿ ದುರ್ಬಲ ವರ್ಗಗಳಿಗೆ 'ಪಿಎಸ್‌ಎ' ಸಾಲದ ಅಡಿಯಲ್ಲಿ ಕಡ್ಡಾಯ ಅವಶ್ಯಕತೆಗಳನ್ನು ಸಾಧಿಸಬೇಕೆಂದು ಎಲ್ಲಾ ಸದಸ್ಯ ಬ್ಯಾಂಕುಗಳನ್ನು 'ಎಸ್‌ಎಲ್‌ಬಿಸಿ' ವಿನಂತಿಸಿತು.

ಸಭೆಗಳಿಗೆ ಹಾಜರಾಗುವವರು ಬ್ಯಾಂಕಿನ ಕಾರ್ಯಕ್ಷಮತೆಯ ಬಗ್ಗೆ ತಿಳಿದಿರಬೇಕು ಎಂದು ಬ್ಯಾಂಕುಗಳಿಗೆ ಸೂಚನೆ ನೀಡುವಂತೆ ಎಸಿಎಸ್ ಮತ್ತು ಡಿಸಿ ಅವರು 'ಎಸ್‌ಎಲ್‌ಬಿಸಿ'ಗೆ ಸಲಹೆ ನೀಡಿದರು.

**(ಕ್ರಮ: ಎಸ್‌ಎಲ್‌ಬಿಸಿ, ಎಲ್ಲಾ ಸದಸ್ಯ ಬ್ಯಾಂಕುಗಳು, ಎಲ್‌ಡಿಎಂಗಳು ಮತ್ತು ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ-ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ 23.2.2: ರಾಜ್ಯದ ಗುರುತಿಸಲಾದ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಹಣಕಾಸು ಅಡಿಯಲ್ಲಿ ಪ್ರಗತಿ:**

2024-25ನೇ ಸಾಲಿನಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಹೆಚ್ಚಿನ ಸಾಲ ನೀಡಲು ಶಾಖೆಗಳಿಗೆ ಸಲಹೆ ನೀಡುವಂತೆ ಬೀದರ್ (ಎಸ್‌ಬಿಐ), ಕಲಬುರಗಿ (ಎಸ್‌ಬಿಐ) ಜಿಲ್ಲೆಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ (ಕೆನರಾ ಬ್ಯಾಂಕ್) ಲೀಡ್ ಜಿಲ್ಲಾ ಮ್ಯಾನೇಜರ್‌ಗಳನ್ನು 'ಎಸ್‌ಎಲ್‌ಬಿಸಿ' ಕೋರಿದೆ**.**

**(ಕ್ರಮ: ಎಲ್‌ಡಿಎಂಗಳು ಬೀದರ್, ಕಲಬುರಗಿ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಎಲ್ಲಾ ಸದಸ್ಯ ಬ್ಯಾಂಕುಗಳು)**

**23.3: ಎಸ್‌ಹೆಚ್‌ಜಿ-ಬ್ಯಾಂಕ್ ಸಂಪರ್ಕ / ಜಂಟಿ ಹೊಣೆಗಾರಿಕೆ ಗುಂಪುಗಳ ಅಡಿಯಲ್ಲಿ ಪ್ರಗತಿ:**

**ಸ್ವಸಹಾಯ ಗುಂಪುಗಳ (ಎಸ್‌ಹೆಚ್‌ಜಿ) ಅಡಿಯಲ್ಲಿ ಪ್ರಗತಿ:**

30.09.2024 ರವರೆಗೆ ಸ್ವಸಹಾಯ ಗುಂಪುಗಳ ಅಡಿಯಲ್ಲಿ ಒಟ್ಟು ಬಾಕಿ 24006 ಕೋಟಿ ರೂ**.**ಗಳಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು**.**

ಮುಂದಿನ ಸಭೆಗಳಲ್ಲಿ ವಿಂಗಡಿಸಲಾದ 'ಎನ್‌ಆರ್‌ಎಲ್‌ಎಂ ಎಸ್‌ಹೆಜಿ'ಗಳನ್ನು ಪರಿಶೀಲಿಸುವಂತೆ ಎಸಿಎಸ್ ಮತ್ತು ಡಿಸಿ ಅವರು 'ಎಸ್‌ಎಲ್‌ಬಿಸಿ'ಗೆ ಸಲಹೆ ನೀಡಿದರು**.** ಜೊತೆಗೆ**,** ಎಸ್‌ಹೆಚ್‌ಜಿ ಬ್ಯಾಂಕ್ ಸಂಪರ್ಕದ ಅಡಿಯಲ್ಲಿ ಅಗ್ರ **5** ಬ್ಯಾಂಕುಗಳನ್ನು ಒದಗಿಸುವಂತೆ 'ಎಸ್‌ಎಲ್‌ಬಿಸಿ'ಗೆ ಸೂಚನೆ ನೀಡಿದರು**.**

**(ಕ್ರಮ: ಎಸ್‌ಎಲ್‌ಬಿಸಿ ಮತ್ತು ಎಲ್ಲಾ ಸದಸ್ಯ ಬ್ಯಾಂಕುಗಳು)**

**ಜಂಟಿ ಹೊಣೆಗಾರಿಕೆ ಗುಂಪುಗಳ (ಜೆಎಲ್‌ಜಿ) ಅಡಿಯಲ್ಲಿ ಪ್ರಗತಿ:**

ಸೆಪ್ಟೆಂಬರ್ 30, 2024ರ ವೇಳೆಗೆ 'ಜೆಎಲ್‌ಜಿ'ಗಳ ಅಡಿಯಲ್ಲಿ ಒಟ್ಟು ಬಾಕಿ 17569.00 ಕೋಟಿ ರೂ.ಗಳಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು ಮತ್ತು ನಿಗದಿಪಡಿಸಿದ ಗುರಿಗಳನ್ನು ಸಾಧಿಸುವತ್ತ ಗಮನ ಹರಿಸುವಂತೆ ಸದಸ್ಯ ಬ್ಯಾಂಕುಗಳನ್ನು ಕೋರಿದರು.

ರಾಜ್ಯದ 'ಎಸ್‌ವಿವೈಎಸ್‌ವೈ'ನ ಎಲ್ಲಾ ಯುವ ಗುಂಪುಗಳನ್ನು 'ಜೆಎಲ್‌ಜಿ' ಯೋಜನೆಗಳ ಅಡಿ ತರಬೇಕು ಎಂದು ಎಸಿಎಸ್ ಮತ್ತು ಡಿಸಿ ಅವರು ಸದನಕ್ಕೆ ಮಾಹಿತಿ ನೀಡಿದರು.

**(ಕ್ರಮ: ಸದಸ್ಯ ಬ್ಯಾಂಕುಗಳು)**

**23.4: 30.09.2024 ರಂದು ಇದ್ದಂತೆ 'ಸ್ಟ್ಯಾಂಡ್ ಅಪ್ ಇಂಡಿಯಾ'(ಎಸ್‌ಯುಐ) ಯೋಜನೆಯಲ್ಲಿ ಪ್ರಗತಿ**

'ಸ್ಟ್ಯಾಂಡ್ ಅಪ್ ಇಂಡಿಯಾ' ಯೋಜನೆಯಡಿ ಸೆಪ್ಟೆಂಬರ್ 2024 ರವರೆಗೆ ಬ್ಯಾಂಕುಗಳು **198** ಕೋಟಿ ರೂ.ಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಸದನದ ಗಮನಕ್ಕೆ ತಂದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು)**

**23.5: 'ಮುದ್ರಾ' ಯೋಜನೆಯಡಿ ಮಂಜೂರಾದ ಮಂಜೂರಾತಿಯಲ್ಲಿ ಪ್ರಗತಿ:**

01.04.2024 ರಿಂದ 30.09.2024 ರವರೆಗೆ ಸದಸ್ಯ ಬ್ಯಾಂಕುಗಳು 16731 ಕೋಟಿ ರೂ. ಮೊತ್ತದ 1832484 'ಮುದ್ರಾ' ಸಾಲಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು. ಎಲ್ಲಾ ಸದಸ್ಯ ಬ್ಯಾಂಕುಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಸಂಬಂಧಿತ ಇಲಾಖೆಯ ಬೆಂಬಲದೊಂದಿಗೆ 'ಮುದ್ರಾ' ಸಾಲ ಮಂಜೂರಾತಿ ಮತ್ತು ವಿತರಣೆಗೆ ಸಂಬಂಧಿಸಿದಂತೆ **ಕರ್ನಾಟಕ ರಾಜ್ಯವು ದೇಶದಲ್ಲಿ 2ನೇ ಸ್ಥಾನ** ಗಳಿಸಿದೆ ಎಂದು ಸಂಚಾಲಕರು ಮಾಹಿತಿ ನೀಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**23.6 'ಪಿಎಂಎಫ್‌ಎಂಇ' ಯೋಜನೆಯಡಿ ಪ್ರಗತಿ:**

30.09.2024 ರವರೆಗೆ ಸಲ್ಲಿಸಿದ 1516 ಅರ್ಜಿಗಳ ಪೈಕಿ ಬ್ಯಾಂಕುಗಳು 868 ಅರ್ಜಿಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಎಲ್ಲಾ ಸಾಲಗಳನ್ನು ಮಂಜೂರು ಮಾಡಲು ಹಾಗೂ ಮಂಜೂರಾತಿ ಮತ್ತು ವಿತರಣೆಯ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳನ್ನು ತುರ್ತು ಆಧಾರದ ಮೇಲೆ ತೆರವುಗೊಳಿಸಲು ಎಸಿಎಸ್ ಮತ್ತು ಡಿಸಿ ಅವರು ಎಲ್ಲಾ ಬ್ಯಾಂಕುಗಳಿಗೆ ಸೂಚನೆ ನೀಡಿದರು. ಇದಲ್ಲದೆ, ಪರಿಶೀಲನೆಗಾಗಿ ದಿನವಾರು ಬಾಕಿ ವಿವರವನ್ನು ಒದಗಿಸುವಂತೆ ಅವರು 'ಎಸ್‌ಎಲ್‌ಬಿಸಿ'ಗೆ ಸೂಚನೆ ನೀಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು, ಎಲ್‌ಡಿಎಂಗಳು, ಪಿಎಂಎಫ್‌ಎಂಇಯ ವಿಶೇಷ ಅಧಿಕಾರಿ, ಕೃಷಿ ಇಲಾಖೆ-ಕೆಎಪಿಇಸಿ)**

**23.7: 'ಪಿಎಂಜೆಡಿವೈ' ಖಾತೆಗೆ ಆಧಾರ್ ಜೋಡಣೆ ಅಡಿಯಲ್ಲಿ ಪ್ರಗತಿ:**

30.09.2024 ರ ವೇಳೆಗೆ 'ಪಿಎಂಜೆಡಿವೈ' ಖಾತೆಗಳಲ್ಲಿ 80.00% ಆಧಾರ್ ಜೋಡಣೆಯಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್ಲಾ ಎಲ್‌ಡಿಎಂಗಳು)**

---

**23.8: 2024-25ರ ಹಣಕಾಸು ವರ್ಷದಲ್ಲಿ ವಾರ್ಷಿಕ 'ಅಟಲ್ ಪಿಂಚಣಿ ಯೋಜನೆ' (ಎಪಿವೈ) ಗುರಿಗಳ ಅಡಿಯಲ್ಲಿ ಬ್ಯಾಂಕುಗಳ ಕಾರ್ಯಕ್ಷಮತೆ: (01.04.2024 ರಿಂದ 30.09.2024 ರವರೆಗೆ)**

2024-25ನೇ ಸಾಲಿನ ಹಣಕಾಸು ವರ್ಷದಲ್ಲಿ 30.09.2024ರ ವೇಳೆಗೆ 'ಪಿಎಫ್‌ಆರ್‌ಡಿಎ' ನಿಗದಿಪಡಿಸಿದ 'ಎಪಿವೈ' ಗುರಿಯಲ್ಲಿ ಕರ್ನಾಟಕ ರಾಜ್ಯವು 46% ಸಾಧನೆ ಮಾಡಿದೆ ಮತ್ತು ಬ್ಯಾಂಕುಗಳು 'ಎಪಿವೈ' ಅಡಿಯಲ್ಲಿ ಅಭಿಯಾನದ ಮಾದರಿಯಲ್ಲಿ ಗರಿಷ್ಠ ಅರ್ಜಿಗಳನ್ನು ನೋಂದಾಯಿಸಬೇಕಾಗಿದೆ **ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು**.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 24**

**ಹಣಕಾಸು ಸೇರ್ಪಡೆ ಉಪಕ್ರಮಗಳು, ಬ್ಯಾಂಕಿಂಗ್ ಜಾಲದ ವಿಸ್ತರಣೆ ಮತ್ತು ಹಣಕಾಸು ಸಾಕ್ಷರತೆಯ ಪರಾಮರ್ಶೆ:**

'ಜನ್ ಧನ್ ದರ್ಶಕ್ ಆ್ಯಪ್' ಮತ್ತು 'ಎಫ್‌ಐ ಪ್ಲಾನ್' ಪೋರ್ಟಲ್ ಪ್ರಕಾರ, ಸೆಪ್ಟೆಂಬರ್ 2024 ರ ವೇಳೆಗೆ 5 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ಶಾಖೆ, ಬಿಸಿ ಅಥವಾ ಐಪಿಪಿಬಿ ಇಲ್ಲದ, ಯಾವುದೇ ಬ್ಯಾಂಕ್ ಸೌಲಭ್ಯವಿಲ್ಲದ ಗ್ರಾಮಗಳಿಲ್ಲ ಎಂದು ಉಪ ಸಂಚಾಲಕರು ಮಾಹಿತಿ ನೀಡಿದರು.

ಈ ಕೆಳಗಿನ ಸ್ಥಳಗಳಲ್ಲಿ ಇಟ್ಟಿಗೆ ಮತ್ತು ಗಾರೆ ಶಾಖೆಯನ್ನು ತೆರೆಯುವ ಬಗ್ಗೆ 'ಎಸ್‌ಎಲ್‌ಸಿ'ಯು ಆರ್‌ಬಿಐ / ರಾಜ್ಯ ಸರ್ಕಾರದಿಂದ ಸಂವಹನವನ್ನು ಸ್ವೀಕರಿಸಿದೆ:

**1. ನಿಲಜಿ ಗ್ರಾಮ, ಬೆಳಗಾವಿ ಜಿಲ್ಲೆ:**

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ನಿಲಜಿ ಗ್ರಾಮದಲ್ಲಿ ರಾಷ್ಟ್ರೀಕೃತ ಬ್ಯಾಂಕ್ ಶಾಖೆಯನ್ನು ತೆರೆಯಲು ನೀಲಜಿ ಗ್ರಾಮದ ನಿವಾಸಿ ಶ್ರೀ ಈರಪ್ಪ ಶಂಭು ಕಾಂಬಳೆ ಅವರಿಂದ 'ಎಸ್‌ಎಲ್ ಬಿಸಿ' ಕರ್ನಾಟಕವು ಪ್ರಾತಿನಿಧ್ಯವನ್ನು ಸ್ವೀಕರಿಸಿದೆ. ಸರ್ಕಾರದ ಹಣಕಾಸು ಇಲಾಖೆ (ಆರ್ಥಿಕ ಸುಧಾರಣೆ) ಮೂಲಕ ಇದನ್ನು ಸ್ವೀಕರಿಸಲಾಗಿದೆ.

ಅದರಂತೆ, ಸಮೀಕ್ಷೆ ನಡೆಸುವಂತೆ ಬೆಳಗಾವಿಯ ಎಲ್‌ಡಿಎಂಗೆ 'ಎಸ್‌ಎಲ್‌ಬಿಸಿ'ಯು ಸಲಹೆ ನೀಡಿತು.

ಅವರ ಸಮೀಕ್ಷೆಯ ವರದಿಯ ಪ್ರಕಾರ, ನಿಲಜಿ ಗ್ರಾಮದಲ್ಲಿ 'ಇಂಡಿಯಾ ಪೋಸ್ಟಲ್ ಪೇಮೆಂಟ್ ಬ್ಯಾಂಕ್' ಮತ್ತು 'ಫಿನೋ ಪೇಮೆಂಟ್ ಬ್ಯಾಂಕ್ ಬಿಸಿ' ಅಸ್ತಿತ್ವದಲ್ಲಿವೆ. ಅಲ್ಲದೆ, ನಿಲಾಜಿಯಿಂದ 6 ಕಿ.ಮೀ ದೂರದಲ್ಲಿರುವ (ನೈಋತ್ಯ) ಮೊರಬ್ ಗ್ರಾಮದಲ್ಲಿ 'ಕರ್ನಾಟಕ ವಿಕಾಸ್ ಗ್ರಾಮೀಣ ಬ್ಯಾಂಕ್' ಅಸ್ತಿತ್ವದಲ್ಲಿದೆ. ನಿಲಾಜಿಯಿಂದ 10 ಕಿ.ಮೀ ದೂರದಲ್ಲಿರುವ ಹಾರೂಗೇರಿ ಗ್ರಾಮದಲ್ಲಿ ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್' ಮತ್ತು 'ಆರ್‌ಬಿಎಲ್' ಬ್ಯಾಂಕ್ ಅಸ್ತಿತ್ವದಲ್ಲಿವೆ. 2011ರ ಜನಗಣತಿಯ ಪ್ರಕಾರ ನಿಲಜಿ ಗ್ರಾಮದ ಜನಸಂಖ್ಯೆ 6,904 ಇದೆ.

'ಲೀಡ್ ಬ್ಯಾಂಕ್ ಯೋಜನೆ ಕುರಿತಾದ ಆರ್‌ಬಿಐ ಮಾಸ್ಟರ್ ಸುತ್ತೋಲೆ' 01.04.2024ರ ಪ್ಯಾರಾ 5.2 (ಬ್ಯಾಂಕಿಂಗ್ ಮಳಿಗೆಗಳ ಅಂತಿಮ ಮಾರ್ಗಸೂಚಿಗಳ ಬಗ್ಗೆ ಆರ್‌ಬಿಐ ಸುತ್ತೋಲೆ, ಡಿಒಆರ್ ಸುತ್ತೋಲೆ, ದಿನಾಂಕ 18.05.2024) ಪ್ರಕಾರ ಇಟ್ಟಿಗೆ ಮತ್ತು ಗಾರೆ ಶಾಖೆಗಳು ಆರ್ಥಿಕ ಸೇರ್ಪಡೆಯ ಅವಿಭಾಜ್ಯ ಅಂಗವಾಗಿವೆ. ಆದ್ದರಿಂದ, ಯಾವುದೇ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕಿನ ('ಆರ್‌ಆರ್‌ಬಿ'ಗಳು

ಸೇರಿದಂತೆ) ಶಾಖೆಯಿಲ್ಲದ 5000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಹಳ್ಳಿಗಳ ಮೇಲೆ ಗಮನ ಕೇಂದ್ರೀಕರಿಸಲು ನಿರ್ಧರಿಸಲಾಯಿತು.

ನಿಲಾಜಿ ಗ್ರಾಮವು 6904 ಜನಸಂಖ್ಯೆಯನ್ನು ಹೊಂದಿದೆ ಮತ್ತು 'ಇಂಡಿಯಾ ಪೋಸ್ಟಲ್ ಪೇಮೆಂಟ್ ಬ್ಯಾಂಕ್' ನಿಲಾಜಿಯಲ್ಲಿ ಶಾಖೆಯನ್ನು ಹೊಂದಿದೆ. 'ಐಪಿಪಿಬಿ' ಒಂದು ನಿಗದಿತ ವಾಣಿಜ್ಯ ಪಾವತಿ ಬ್ಯಾಂಕ್ ಆಗಿದೆ ಮತ್ತು ಆರ್‌ಬಿಐ ಸುತ್ತೋಲೆಯ ಪ್ರಕಾರ ಇದನ್ನು ಅನುಸರಿಸಲಾಗಿದೆ.

**2. ದೇವಕರ್ ಗ್ರಾಮ, ಉತ್ತರ ಕನ್ನಡ ಜಿಲ್ಲೆ:**

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ದೇವಕರ್ ಗ್ರಾಮವು ನೀರಿನಲ್ಲಿ ಮುಳುಗಿದೆ ಮತ್ತು ಇದು ವಾಸಯೋಗ್ಯವಲ್ಲದ ಪ್ರದೇಶವಾಗಿದೆ ಆದರೆ ಭಾರತ ಸರ್ಕಾರದ ಆರ್ಥಿಕ ಇಲಾಖೆಯ 'ಜನ್ ಧನ್ ದರ್ಶಕ್' ಪೋರ್ಟಲ್ ಪ್ರಕಾರ, ದೇವಕರ್ ಗ್ರಾಮವು ಇನ್ನೂ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲದ ಗ್ರಾಮವಾಗಿ ಪ್ರದರ್ಶಿಸಲ್ಪಡುತ್ತಿದೆ. ಸದನವು ದೇವಕರ್ ಗ್ರಾಮವನ್ನು ವಾಸಯೋಗ್ಯವಲ್ಲದ ಪ್ರದೇಶವನ್ನಾಗಿ ಪರಿಗಣಿಸಲು ಅನುಮೋದಿಸಿದೆ.

**ಕಾರ್ಯಸೂಚಿ ವಿಷಯ ಸಂಖ್ಯೆ - 25**

**ಬ್ರಾಂಚ್ ಸಂಪರ್ಕ ಜಾಲ:**

ಬ್ಯಾಂಕ್ ಶಾಖೆಗಳ ಸಂಖ್ಯೆ 30.06.2024ರ ವೇಳೆಗೆ 12,310 ಇದ್ದದ್ದು, 30.09.2024ರ ವೇಳೆಗೆ 12,394ಕ್ಕೆ ಏರಿದೆ. ಇದು ತ್ರೈಮಾಸಿಕ ಆಧಾರದ ಮೇಲೆ 84 ಶಾಖೆಗಳ ಹೆಚ್ಚಳವನ್ನು ತೋರಿಸುತ್ತದೆ ಎಂದು ಸಂಚಾಲಕರು ಮಾಹಿತಿ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ - 26**

**ಗ್ರಾಮೀಣ ಬ್ಯಾಂಕ್ ಶಾಖೆ ಮುಚ್ಚುವಿಕೆ / ವಿಲೀನ / ಸ್ಥಳಾಂತರದ ಸ್ಥಿತಿ:**

ಬೆಳಗಾವಿ ಮತ್ತು ತುಮಕೂರಿನ 'ಎಲ್‌ಡಿಎಂ'ಗಳಿಂದ 'ಎಸ್‌ಎಲ್‌ಬಿಸಿ'ಗೆ ಈ ಕೆಳಗಿನ ಪ್ರಾತಿನಿಧ್ಯಗಳು ಬಂದಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು. ಈ ಕೆಳಗಿನ ಶಾಖೆಗಳನ್ನು ಮುಚ್ಚಲು ಸದನವು ಅನುಮತಿ ನೀಡಿದೆ.

| **ಜಿಲ್ಲೆಯ ಹೆಸರು** | **ಬ್ಯಾಂಕ್ ಹೆಸರು** | **ವಿಲೀನ/ ಸ್ಥಳಾಂತರಗೊಳ್ಳುವ ಶಾಖೆ** | **ಸ್ವಾಧೀನಪಡಿಸಿಕೊಳ್ಳುವ ಶಾಖೆ/ ಗ್ರಾಮ** | **ಶಾಖೆಗಳ ನಡುವಿನ ಅಂತರ** |
|---|---|---|---|---|
| ಬೆಳಗಾವಿ | ಕರ್ನಾಟಕ ಗ್ರಾಮೀಣ ವಿಕಾಸ್ ಬ್ಯಾಂಕ್ | ಶಿರಹಟ್ಟಿ | ಶಿರಹಟ್ಟಿ ಪುನರ್ವಸತಿ ಕೇಂದ್ರ | 2-3 ಕಿ.ಮೀ. |
| ತುಮಕೂರು | ಕೊಟಕ್ ಮಹೀಂದ್ರಾ ಬ್ಯಾಂಕ್ | ಮುಚ್ಚುವಿಕೆ<br>ಮಂಗಳವಾಡ ಸ್ಯಾಟಲೈಟ್ ಶಾಖೆ | - | - |

**ಕಾರ್ಯಸೂಚಿ ವಿಷಯ ಸಂಖ್ಯೆ - 27**

**ಎಟಿಎಂ ಸಂಪರ್ಕಜಾಲ**

30.06.2024**ರ** ವೇಳೆಗೆ 16705 ರಷ್ಟಿದ್ದ ಒಟ್ಟು ಎಟಿಎಂಗಳ ಸಂಖ್ಯೆ 30.09.202**4**ರ ವೇಳೆಗೆ 16638 ಇಳಿಕೆಯಾಗಿದ್ದು, ಇದು 67 ಎಟಿಎಂಗಳು ಕಡಿಮೆಯಾಗಿರುವುದನ್ನು ಸೂಚಿಸುತ್ತದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಐಸಿಐಸಿಐ ಅಧಿಕಾರಿಗಳು ಎಟಿಎಂಗಳ ಜಾಗದಲ್ಲಿ ನಗದು ಠೇವಣಿ ಯಂತ್ರಗಳನ್ನು ಸ್ಥಾಪಿಸಿದ್ದು, ಇದರಿಂದಾಗಿ ಇಳಿಕೆ ಕಂಡುಬರುತ್ತಿದೆ ಎಂದು ಮಾಹಿತಿ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ - 28**
**ಚಾಲ್ತಿಯಲ್ಲಿರುವ 'ಸಿಎಎಸ್‌ಎ(ಕಾಸಾ)' ಖಾತೆಗಳ ಆಧಾರ್ ಜೋಡಣೆ ಅಡಿಯಲ್ಲಿ ಪ್ರಗತಿ:**
30.09.2024ರ **ವೇಳೆಗೆ ಆಧಾರ್ ಜೋಡಣೆ** ಶೇಕಡಾವಾರು 90% ಆಗಿದೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಇದಲ್ಲದೆ, ಶಾಖೆಗಳನ್ನು ಸಂವೇದನಾಶೀಲಗೊಳಿಸುವಂತೆ ಮತ್ತು ಹೆಚ್ಚುಹೆಚ್ಚು ಆಧಾರ್ ಆಧಾರಿತ ಆನ್‌ಲೈನ್ ಡಿಬಿಟಿ- ಕ್ರೆಡಿಟ್‌ಗಳಿಗೆ ಅನುವುಮಾಡಿಕೊಡಲು ಆಧಾರ್ ಜೋಡಣೆಯನ್ನು ಮತ್ತಷ್ಟು ಸುಧಾರಿಸುವಂತೆ ಹಾಗೂ ಡಿಜಿಟಲ್ ಬ್ಯಾಂಕಿಂಗ್ ಅನ್ನು ಜನಪ್ರಿಯಗೊಳಿಸುವಂತೆ ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳಿಗೆ ಸಂಚಾಲಕರು ಮನವಿ ಮಾಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ - 29**

**ವಲಯವಾರು 'ಎನ್‌ಪಿಎ'ಗಳ ಸ್ಥಿತಿ**

**29.1: 30.09.2024 ರಂತೆ ಅನುತ್ಪಾದಕ ಆಸ್ತಿಗಳ ಸ್ಥಿತಿ:**

30.09.2024ರ ವೇಳೆಗೆ ಒಟ್ಟು ಅನುತ್ಪಾದಕ ಆಸ್ತಿ ಮೊತ್ತ 52492 ಕೋಟಿ ರೂ.ಗಳಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**29.2: 'ಪಿಎಂಇಜಿಪಿ' ಅಡಿಯಲ್ಲಿ ಬ್ಯಾಂಕ್ ಬಾಕಿ ವಸೂಲಿ:**

'ಪಿಎಂಇಜಿಪಿ' ಅಡಿಯಲ್ಲಿ ಅನುತ್ಪಾದಕ ಆಸ್ತಿಯ(ಎನ್‌ಪಿಎ) ಪಾಲು 21% ಇದ್ದು, ಈ ಯೋಜನೆಯಲ್ಲಿ 'ಎನ್‌ಪಿಎ' ಶೇಕಡಾವಾರು ತುಂಬಾ ಹೆಚ್ಚಾಗಿರುವುದರಿಂದ ಬಾಕಿ ವಸೂಲಾತಿಗೆ ಬ್ಯಾಂಕುಗಳಿಗೆ ಅಗತ್ಯ ಬೆಂಬಲ ನೀಡುವಂತೆ ಸಂಬಂಧಪಟ್ಟ ಇಲಾಖೆಗಳನ್ನು ಕರ್ನಾಟಕದ ಸರ್ಕಾರದ ಎಸಿಎಸ್ ಮತ್ತು ಡಿಸಿ ಅವರು ವಿನಂತಿಸಿದ್ದಾರೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**(ಕ್ರಮ: ಕೆವಿಐಸಿ, ಕೆವಿಐಬಿ ಮತ್ತು ಡಿಐಸಿ ಇಲಾಖೆಗಳು ಮತ್ತು ಸದಸ್ಯ ಬ್ಯಾಂಕುಗಳು)**

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

**ಕಾರ್ಯಸೂಚಿ ವಿಷಯ ಸಂಖ್ಯೆ - 30**

**ಡಿಸಿಸಿ/'ಡಿಎಲ್‌ಆರ್‌ಸಿ' ಸಭೆಯಲ್ಲಿ ಬಗೆಹರಿಯದ ಸಮಸ್ಯೆಗಳು:**

'ಎಲ್‌ಡಿಎಂ'ಗಳಿಂದ ಇತ್ಯರ್ಥವಾಗದ ಯಾವುದೇ ಸಮಸ್ಯೆಗಳನ್ನು ಸ್ವೀಕರಿಸಲಾಗಿಲ್ಲ.

**ಕಾರ್ಯಸೂಚಿ ವಿಷಯ ಸಂಖ್ಯೆ - 31**

**ಪರಿಶೀಲನಾ ಅವಧಿಯಲ್ಲಿ ನಡೆದ ಉಪಸಮಿತಿ ಸಭೆಗಳು:**

ಜೂನ್ 2024ಕ್ಕೆ ದುರ್ಬಲ ವಿಭಾಗದ ಉಪ ಸಮಿತಿ ಸಭೆ(ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ), ಜೂನ್ 2024ಕ್ಕೆ ವಸೂಲಾತಿ ಮತ್ತು ಪುನರ್ವಸತಿ ಉಪ ಸಮಿತಿ ಸಭೆ(ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ) ಮತ್ತು ಜೂನ್ 2024ಕ್ಕೆ 'ಆರ್‌ಎಸ್‌ಇಟಿಐ ಕುರಿತ ಉಪ ಸಮಿತಿ ಸಭೆಯನ್ನು(ಎಸ್‌ಬಿಐ) ಸಂಚಾಲಕ ಬ್ಯಾಂಕ್ ನಡೆಸಿರುವುದಿಲ್ಲ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

ಮೇಲಿನ ಸಭೆಗಳನ್ನು ತಕ್ಷಣವೇ ನಡೆಸಿ ನಡಾವಳಿಗಳನ್ನು ಹಂಚಿಕೊಳ್ಳುವಂತೆ ಅಧ್ಯಕ್ಷರು ಸದಸ್ಯ ಸಂಚಾಲಕ ಬ್ಯಾಂಕ್‌ಗೆ ಸೂಚಿಸಿದರು.

**(ಕ್ರಮ: ಎಸ್‌ಬಿಐ)**

**ಕಾರ್ಯಸೂಚಿ ವಿಷಯ ಸಂಖ್ಯೆ - 32**

**ಇತರ ಸಮಸ್ಯೆಗಳು:**

**32.1 ಸ್ವಾಮಿತ್ವ (ಗ್ರಾಮಗಳ ಸಮೀಕ್ಷೆ ಮತ್ತು ಗ್ರಾಮ ಪ್ರದೇಶಗಳಲ್ಲಿ ಸುಧಾರಿತ ತಂತ್ರಜ್ಞಾನದೊಂದಿಗೆ ಮ್ಯಾಪಿಂಗ್) ಯೋಜನೆ:**

ಪಂಚಾಯತ್ ರಾಜ್ ಸಚಿವಾಲಯ, ರಾಜ್ಯ ಪಂಚಾಯತ್ ರಾಜ್ ಇಲಾಖೆ, ರಾಜ್ಯ ಕಂದಾಯ ಇಲಾಖೆ ಮತ್ತು ಸರ್ವೇ ಆಫ್ ಇಂಡಿಯಾದ ಸಹಯೋಗದ ಪ್ರಯತ್ನಗಳೊಂದಿಗೆ ಡ್ರೋನ್ ಸರ್ವೇಯಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು 'ಅಬಾದಿ' ಪ್ರದೇಶಗಳ ಗಡಿ ಗುರುತಿಸುವಿಕೆ ಮಾಡಲಾಗುವುದು ಎಂದು ಸಂಚಾಲಕರು ಮಾಹಿತಿ ನೀಡಿದರು.

'ಸ್ವಾಮಿತ್ವ' ಯೋಜನೆಯಡಿ ನೀಡಲಾದ ಆಸ್ತಿ ಕಾರ್ಡ್‌ಗಳು ಬೇಷರತ್ತಾದ ವರ್ಗಾವಣೆಯ ಹಕ್ಕು ಸೇರಿದಂತೆ ಸಂಪೂರ್ಣ ಮಾಲೀಕತ್ವದ ಹಕ್ಕುಗಳನ್ನು ಹೊಂದಿರುವಂತೆ ಅಗತ್ಯ ಶಾಸನಾತ್ಮಕ ಬದಲಾವಣೆಗಳನ್ನು ತರಲು ನಾವು ಸಂಬಂಧಪಟ್ಟ ರಾಜ್ಯ ಸರ್ಕಾರಿ ಇಲಾಖೆಗಳನ್ನು ವಿನಂತಿಸುತ್ತೇವೆ.

**32.2. ಬ್ಯಾಂಕುಗಳಿಂದ ಕನ್ನಡ ಭಾಷೆಯ ಅನುಷ್ಠಾನ.**

ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು ಈ ಕೆಳಗಿನ ವಿಷಯಗಳನ್ನು ಖಚಿತಪಡಿಸಿಕೊಳ್ಳಲು ಸಂಚಾಲಕರು ವಿನಂತಿಸಿದರು:

**1)** ಶಾಖೆಗಳಲ್ಲಿ ಖಾತೆ ತೆರೆಯುವ ನಮೂನೆಗಳು**,** ಸಾಲದ ಅರ್ಜಿಗಳು**,** ಚಲನ್‌ಗಳು ಇತ್ಯಾದಿಗಳು ಕನ್ನಡ ಭಾಷೆಯಲ್ಲಿ ಲಭ್ಯವಿರುವುದು**.**

**2)** ಬ್ಯಾಂಕ್ ಎಟಿಎಂಗಳು**,** ಬಿಎನ್‌ಎಗಳು**,** ಸೈನ್ ಬೋರ್ಡ್ಸ್‌ಗಳು**,** ಲೆಟರ್ ಹೆಡ್‌ಗಳು**,** ಬ್ಯಾಂಕ್ **/** ಶಾಖಾ ಮೊಹರು ಮತ್ತು ಆರ್‌ಎಸ್‌ಇಟಿಐಗಳು **/** ರುಡ್ಸೆಟಿಗಳು ಮತ್ತು 'ಎಫ್‌ಎಲ್‌ಸಿ'ಗಳಲ್ಲಿ ಕನ್ನಡ ಭಾಷೆಯ ಬಳಕೆ**.**

ಕನ್ನಡೇತರ ಉದ್ಯೋಗಿಗಳಿಗೆ ಕನ್ನಡ ಭಾಷಾ ತರಬೇತಿ ನೀಡುವುದನ್ನು ಖಚಿತಪಡಿಸಿಕೊಳ್ಳಲು ಸದಸ್ಯ ಬ್ಯಾಂಕುಗಳನ್ನು ಎಸ್‌ಎಲ್‌ಬಿಸಿ ವಿನಂತಿಸಿತು. ಜೊತೆಗೆ, ಹೀಗೆ ನಡೆಸಲಾದ ತರಬೇತಿ ಶಿಬಿರಗಳ ಸಂಖ್ಯೆಯ ಬಗ್ಗೆ ತ್ರೈಮಾಸಿಕ ಆಧಾರದ ಮೇಲೆ ಎಸ್‌ಎಲ್‌ಬಿಸಿಗೆ ಮಾಹಿತಿ ನೀಡುವಂತೆ ಬ್ಯಾಂಕುಗಳನ್ನು ಕೋರಲಾಗಿದೆ.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು)**

**32.3: 30.09.2024ರಂದು ಇದ್ದಂತೆ ಪ್ರಾಯೋಜಕ ಬ್ಯಾಂಕುಗಳು ವರದಿ ಮಾಡಿದ 'ಆರ್‌ಎಸ್‌ಇಟಿಐ'ಗಳು / 'ರುಡ್‌ಸೆಟಿ'ಗಳ (RSETIs / RUD-SETIs)ಸ್ಥಿತಿಗತಿ ಈ ಕೆಳಗಿನಂತಿದೆ:**

30.09.2024 ರವರೆಗೆ 1027 ತರಬೇತಿ ಕಾರ್ಯಕ್ರಮಗಳನ್ನು ನಡೆಸುವ ಗುರಿಯನ್ನು ಹೊಂದಲಾಗಿತ್ತು, ಆದರೆ ಒಟ್ಟು 611 ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**32.4: ಕರ್ನಾಟಕ ರಾಜ್ಯದಲ್ಲಿ 'ರುಡ್‌ಸೆಟಿ' (7) / 'ಆರ್‌ಎಸ್‌ಇಟಿಐ' (24) ಕಾರ್ಯನಿರ್ವಹಣೆ ಮತ್ತು ಕಾರ್ಯಕ್ಷಮತೆ:**

2024-25ರ ಆರ್ಥಿಕ ವರ್ಷದಲ್ಲಿ ತರಬೇತಿ ಪಡೆದ ವ್ಯಕ್ತಿಗಳ ಸಂಖ್ಯೆ 407330 ಆಗಿದ್ದು, ಈ ಪೈಕಿ ಕ್ರೆಡಿಟ್ ಲಿಂಕ್ ಸಂಖ್ಯೆ 176749 ಎಂದು ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು.

**(ಕ್ರಮ: 'ಆರ್‌ಎಸ್‌ಇಟಿಐ' / ರುಡ್‌ಸೆಟಿ ರಾಜ್ಯ ನಿರ್ದೇಶಕರು, 'ಆರ್‌ಎಸ್‌ಇಟಿಐ ಕುರಿತ ಎಸ್‌ಎಲ್‌ಬಿಸಿ ಉಪಸಮಿತಿ' ಮತ್ತು ಕರ್ನಾಟಕದ ಸರ್ಕಾರದ ಕೌಶಲ್ಯ ಅಭಿವೃದ್ಧಿ ಇಲಾಖೆ)**

**32.5: ರಾಜ್ಯದ ಆಧಾರ್ ನೋಂದಣಿ ಕೇಂದ್ರಗಳ (ಎಇಸಿ) ಸ್ಥಿತಿ:**

ದಾಖಲಾತಿಗಳನ್ನು ಸುಧಾರಿಸಲು ಮತ್ತು ಗರಿಷ್ಠ ದಾಖಲಾತಿಗಳು / ನವೀಕರಣಗಳನ್ನು ಕೈಗೊಳ್ಳುವಂತೆ ಎಲ್ಲಾ ಬ್ಯಾಂಕುಗಳಿಗೆ 'ಎಸ್‌ಎಲ್‌ಬಿಸಿ' ವಿನಂತಿಸಿದೆ. ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ದಾಖಲಾತಿ / ನವೀಕರಣಗಳಿಗೆ ಹೆಚ್ಚಿನ ಗಮನ ನೀಡುವಂತೆ ಎಲ್ಲಾ ಸದಸ್ಯ ಬ್ಯಾಂಕುಗಳಿಗೆ 'ಎಸ್‌ಎಲ್‌ಬಿಸಿ' ವಿನಂತಿಸಿದೆ.

**32.6: ಕೇಂದ್ರ ವಲಯದ ಬಡ್ಡಿ ಸಬ್ಸಿಡಿ (ಸಿಎಸ್‌ಐಎಸ್) ಯೋಜನೆಯ ಕಾರ್ಯಕ್ಷಮತೆ ಪರಿಶೀಲನೆ**

ಕೇಂದ್ರ ವಲಯದ ಬಡ್ಡಿ ಸಬ್ಸಿಡಿ (ಸಿಎಸ್‌ಐಎಸ್) ಯೋಜನೆಯ ಕಾರ್ಯಕ್ಷಮತೆ ಪರಿಶೀಲನೆಗೆ ಸಂಬಂಧಿಸಿದಂತೆ ಆರ್ಥಿಕ ಸೇವೆಗಳ ಇಲಾಖೆಯಿಂದ 'ಎಸ್‌ಎಲ್‌ಬಿಸಿ'ಯು ಸಂವಹನವನ್ನು ಸ್ವೀಕರಿಸಿದೆ. ಈ ಯೋಜನೆಯಡಿ, ಎಲ್ಲಾ ಮೂಲಗಳಿಂದ ಪೋಷಕರ ವಾರ್ಷಿಕ ಆದಾಯ 4.5 ಲಕ್ಷ ರೂ. ಮೀರದ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮೊರಟೋರಿಯಂ ಅವಧಿಯಲ್ಲಿ ಅಂದರೆ ಕೋರ್ಸ್ ಅವಧಿಯಲ್ಲಿ ಮತ್ತು ಷೆಡ್ಯೂಲ್ಡ್ ಬ್ಯಾಂಕುಗಳಿಂದ ಪಡೆದ ಶಿಕ್ಷಣ ಸಾಲದ ಮೇಲೆ ಒಂದು ವರ್ಷದ ಬಡ್ಡಿ ಸಹಾಯಧನವನ್ನು ನೀಡಲಾಗುತ್ತದೆ.

ಎಲ್ಲಾ ಸದಸ್ಯ ಬ್ಯಾಂಕುಗಳು ಪರಿಶೀಲನಾ ಉದ್ದೇಶಕ್ಕಾಗಿ ಅರ್ಹ ಖಾತೆಗಳ ಪಟ್ಟಿಯನ್ನು ಒದಗಿಸಬೇಕೆಂದು ಕೋರಲಾಗಿದೆ.

**32.7: 'ಪಿಎಂ ಸೂರ್ಯ ಘರ್' ಯೋಜನೆಯಡಿ ಸಾಲ ಸೌಲಭ್ಯದ ಮೇಲ್ವಿಚಾರಣೆ: 'ಮುಫ್ತ್ ಬಿಜ್ಲಿ ಯೋಜನೆ' (ಪಿಎಂಎಸ್ ಜಿಎಂಬಿವೈ)**

**ಪಿಎಂ ಸೂರ್ಯ ಘರ್:** ಮುಫ್ತ್ ಬಿಜ್ಲಿ ಯೋಜನೆ (ಪಿಎಂಎಸ್‌ಜಿಎಂಬಿವೈ) ಕಾರ್ಯಕ್ಷಮತೆ ಪರಿಶೀಲನೆಗೆ ಸಂಬಂಧಿಸಿದಂತೆ 'ಎಸ್‌ಎಲ್‌ಬಿಸಿ'ಯು ಆರ್ಥಿಕ ಇಲಾಖೆಯಿಂದ ಸಂವಹನವನ್ನು ಸ್ವೀಕರಿಸಿದೆ. ಸೌರ ಮೇಲ್ಛಾವಣಿ ಸಾಮರ್ಥ್ಯದ ಪಾಲನ್ನು ಹೆಚ್ಚಿಸುವುದು ಮತ್ತು ವಸತಿ ಕುಟುಂಬಗಳನ್ನು ಸ್ವಂತ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಸಬಲೀಕರಣಗೊಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಎಲ್ಲಾ ಸದಸ್ಯ ಬ್ಯಾಂಕುಗಳು ಪರಿಶೀಲನಾ ಉದ್ದೇಶಕ್ಕಾಗಿ ಯೋಜನೆಯಡಿ ಸಾಧನೆಯ ಮಾಹಿತಿ ಒದಗಿಸುವಂತೆ ಕೋರಲಾಗಿದೆ.

**ಕಾರ್ಯಸೂಚಿ ವಿಷಯ ಸಂಖ್ಯೆ - 33**

**ಯಶೋಗಾಥೆಗಳು:**

ಶ್ರೀಮತಿ ಚೈತ್ರಾ ಎನ್.ಸಿ ಮತ್ತು ಶ್ರೀ ಗಣೇಶ್ ಅವರು ನೆಲಮಂಗಲದ 'ರುಡ್ಸೆಟಿ'ಯಿಂದ ತರಬೇತಿ ಪಡೆದರು ಮತ್ತು ಅವರು ಬ್ಯೂಟಿ ಪಾರ್ಲರ್ ಮತ್ತು ಮೊಬೈಲ್ ಮಳಿಗೆಯಲ್ಲಿ ಉದ್ಯಮಶೀಲತೆಯನ್ನು ಯಶಸ್ವಿಯಾಗಿ ಪ್ರಾರಂಭಿಸಿದ್ದಾರೆ ಎಂದು ಉಪ ಸಂಚಾಲಕರು ಸದನಕ್ಕೆ ಮಾಹಿತಿ ನೀಡಿದರು. ಶ್ರೀಮತಿ ಚೈತ್ರಾ ಅವರು ಕೆನರಾ ಬ್ಯಾಂಕಿನಿಂದ ಆರ್ಥಿಕ ನೆರವು ಪಡೆದರು.

**34. ರಿಸರ್ವ್ ಬ್ಯಾಂಕ್ ನಾವಿನ್ಯತಾ ಕೇಂದ್ರದಿಂದ (ಆರ್‌ಬಿಐಹೆಚ್) ವಿಶೇಷ ಆಹ್ವಾನಿತರು**

ಕೆಲವು ಹಣಕಾಸು ಸೇವೆಗಳನ್ನು ತಲುಪಿಸುವ ವಿಧಾನವನ್ನು ಬದಲಾಯಿಸಲು ದೇಶಾದ್ಯಂತದ ಬ್ಯಾಂಕುಗಳೊಂದಿಗೆ ಕೆಲಸ ಮಾಡುವುದು 'ಆರ್‌ಬಿಐಹೆಚ್'ನ ಪಾತ್ರವಾಗಿದೆ ಎಂದು 'ಆರ್‌ಬಿಐಹೆಚ್'ನ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. 'ಆರ್‌ಬಿಐಎಚ್' ಕೆನರಾ ಬ್ಯಾಂಕ್ ಜತೆ ಕೈಜೋಡಿಸಿ ಸ್ವಸಹಾಯ ಗುಂಪುಗಳಿಗೆ(ಎಸ್‌ಹೆಚ್‌ಜಿ) ಸಂಪೂರ್ಣವಾಗಿ ಡಿಜಿಟಲೀಕೃತ ಸಾಲ ಸೌಲಭ್ಯವನ್ನು ಅಭಿವೃದ್ಧಿಪಡಿಸಿದೆ.

ರಾಜ್ಯದಲ್ಲಿ ಡಿಜಿಟಲ್ 'ಎಸ್‌ಹೆಚ್‌ಜಿ'ಗಳು ಮತ್ತು 'ಯುಲಿಪ್'ಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ 'ಆರ್‌ಬಿಐಎಚ್' ಜೊತೆ 'ಎಸ್‌ಎಲ್‌ಬಿಸಿ' ಮತ್ತು 'ಕೆನರಾ ಬ್ಯಾಂಕ್' ಸಭೆ ನಡೆಸುವಂತೆ ಎಸಿಎಸ್ ಮತ್ತು ಡಿಸಿ ಅವರು 'ಎನ್‌ಎಲ್‌ಎಂ' ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆ ನೀಡಿದರು.

**ಟೇಬಲ್ ಕಾರ್ಯಸೂಚಿ-1:**

**ಕೃಷಿ ಸಾಲಕ್ಕೆ ಸಂಬಂಧಿಸಿದಂತೆ 'ಐಆರ್‌ಎಸಿ' ಮಾನದಂಡಗಳು.**
ದಿನಾಂಕ ಅಕ್ಟೋಬರ್ 1, 2021ರ 'ಆರ್‌ಬಿಐ/2021-2022/104 ಡಿಒಆರ್ No.STR.REC.55/21.04.048/2021-22' ಸುತ್ತೋಲೆ ಮೂಲಕ 'ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ'ವು ಆದಾಯ ಗುರುತಿಸುವಿಕೆ, ಆಸ್ತಿ ವರ್ಗೀಕರಣ ಮತ್ತು ಮುಂಗಡಗಳಿಗೆ ಸಂಬಂಧಿಸಿದ ನಿಬಂಧನೆಗಳ ಬಗ್ಗೆ ಮಾಸ್ಟರ್ ಸುತ್ತೋಲೆ - ಪ್ರುಡೆನ್ಶಿಯಲ್ ಮಾನದಂಡಗಳನ್ನು ಹೊರಡಿಸಿದೆ. ಇದರಲ್ಲಿ ಕೃಷಿ

ಚಟುವಟಿಕೆಗಳಿಗೆ ವಿಸ್ತರಿಸಲಾದ ಕೃಷಿ ಸಾಲಕ್ಕಾಗಿ 'ಐಆರ್‌ಎಸಿ' ಮಾನದಂಡಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ;

**ಆರ್‌ಬಿಐ ಸೂಚಿಸಿದ 'ಐಆರ್‌ಎಸಿ' ಮಾನದಂಡಗಳ ಪ್ರಕಾರ,**

a) ದೀರ್ಘಾವಧಿಯ ಬೆಳೆಗಳನ್ನು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯ ಬೆಳೆ ಎಂದು ಪರಿಗಣಿಸಲಾಗುತ್ತದೆ ಮತ್ತು ದೀರ್ಘಾವಧಿಯ ಬೆಳೆಗಳಲ್ಲದ ಬೆಳೆಗಳನ್ನು ಅಲ್ಪಾವಧಿಯ ಬೆಳೆಗಳು ಎಂದು ಪರಿಗಣಿಸಲಾಗುತ್ತದೆ.
b) ಅಲ್ಪಾವಧಿ ಬೆಳೆಗಳಿಗೆ ನೀಡಲಾದ ಸಾಲವನ್ನು, ಎರಡು ಬೆಳೆ ಋತುಗಳಲ್ಲಿ ಅಸಲು ಅಥವಾ ಬಡ್ಡಿಯ ಕಂತು ಬಾಕಿ ಉಳಿದಿದ್ದರೆ 'ಎನ್‌ಪಿಎ' ಎಂದು ಪರಿಗಣಿಸಲಾಗುತ್ತದೆ.
c) ದೀರ್ಘಾವಧಿ ಬೆಳೆಗಳಿಗೆ ನೀಡಲಾದ ಸಾಲವನ್ನು, ಒಂದು ಬೆಳೆ ಋತುವಿನಲ್ಲಿ ಅಸಲು ಅಥವಾ ಬಡ್ಡಿಯ ಕಂತು ಬಾಕಿ ಉಳಿದಿದ್ದರೆ 'ಎನ್‌ಪಿಎ' ಎಂದು ಪರಿಗಣಿಸಲಾಗುತ್ತದೆ.

**ಕರ್ನಾಟಕ ರಾಜ್ಯದ ಪ್ರಮುಖ ಬೆಳೆಗಳು**

| ಕ್ರ.ಸಂ. | ಬೆಳೆ | ಬಿತ್ತನೆ ಸಮಯ | ಕೊಯ್ಲು ಸಮಯ | ಬೆಳೆ ಅವಧಿ |
|---|---|---|---|---|
| I. | **ಮುಂಗಾರು (ಅಲ್ಪಾವಧಿ)** | | | |
| 1 | ಅಕ್ಕಿ / ಭತ್ತ | ಜೂನ್ | ಸೆಪ್ಟೆಂಬರ್ - ಅಕ್ಟೋಬರ್. | 120-145 ದಿನಗಳು (4-5 ತಿಂಗಳು) |
| 2 | ಜೋಳ/ ಸೋರ್ಘಮ್ | ಜೂನ್-ಜುಲೈ | ಸೆಪ್ಟೆಂಬರ್-ಅಕ್ಟೋಬರ್ | 120 ದಿನಗಳಿಂದ 150 ದಿನಗಳು (4-5 ತಿಂಗಳು) |
| 3 | ಸಜ್ಜೆ / ಬಾಜ್ರಾ | ಜೂನ್-ಜುಲೈ | ಸೆಪ್ಟೆಂಬರ್-ಅಕ್ಟೋಬರ್ | 90 - 120 ದಿನಗಳು (3-4 ತಿಂಗಳು) |
| 4 | ಮೆಕ್ಕೆಜೋಳ | ಜೂನ್-ಜುಲೈ | ಸೆಪ್ಟೆಂಬರ್ - ಅಕ್ಟೋಬರ್ | 80 ರಿಂದ 120 ದಿನಗಳು (3-4 ತಿಂಗಳು) |
| 5 | ಕೆಂಪುಬೇಳೆ / ತೊಗರಿ | ಜೂನ್-ಜುಲೈ | ಅಕ್ಟೋಬರ್-ಡಿಸೆಂಬರ್ | 120 ದಿನಗಳಿಂದ 180 ದಿನಗಳು (4-6 ತಿಂಗಳು) |
| 6 | ಹೆಸರು ಕಾಳು | ಜೂನ್-ಜುಲೈ | ಆಗಸ್ಟ್ - ಸೆಪ್ಟೆಂಬರ್. | 80 ರಿಂದ 90 ದಿನಗಳು (2.5 ರಿಂದ 3 ತಿಂಗಳು) |
| 7 | ನೆಲಗಡಲೆ | ಜೂನ್-ಜುಲೈ | ಸೆಪ್ಟೆಂಬರ್ - ಅಕ್ಟೋಬರ್. | 120-145 ದಿನಗಳು (4 - 5 ತಿಂಗಳು) |
| 8 | ಸೋಯಾಬೀನ್ | ಜೂನ್-ಜುಲೈ | ಸೆಪ್ಟೆಂಬರ್ - ಅಕ್ಟೋಬರ್. | 120 - 145 ದಿನಗಳು (4 - 5 ತಿಂಗಳು) |
| 9 | ಸೂರ್ಯಕಾಂತಿ | ಜುಲೈ | ಸೆಪ್ಟೆಂಬರ್ - ಅಕ್ಟೋಬರ್. | 80 ರಿಂದ 110 ದಿನಗಳು (3-4 ತಿಂಗಳು) |
| 10 | ಎಳ್ಳು | ಜೂನ್-ಜುಲೈ | ಆಗಸ್ಟ್ - ಸೆಪ್ಟೆಂಬರ್. | 80 ರಿಂದ 120 ದಿನಗಳು (3 - 4 ತಿಂಗಳು) |
| 11 | ಹತ್ತಿ | ಜೂನ್-ಜುಲೈ | ಡಿಸೆಂಬರ್ - ಜನವರಿ. | 150 ರಿಂದ 180 ದಿನಗಳು (6 ತಿಂಗಳು) |
| 12 | ಮೆಣಸಿನಕಾಯಿ | ಜೂನ್-ಜುಲೈ | ನವೆಂಬರ್ - ಡಿಸೆಂಬರ್ | 180 - 190 ದಿನಗಳು (6 ರಿಂದ 6.5 ತಿಂಗಳು) |
| 13 | ಟೊಮ್ಯಾಟೋ | ಜೂನ್-ಜುಲೈ | ಅಕ್ಟೋಬರ್ - ನವೆಂಬರ್. | 136 - 150 ದಿನಗಳು (4 ರಿಂದ 5 ತಿಂಗಳು) |

## ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ
## ಸಂಚಾಲಕರು: ಕೆನರಾ ಬ್ಯಾಂಕ್

| | | | | |
|---|---|---|---|---|
| 14 | ಈರುಳ್ಳಿ | ಜೂನ್-ಜುಲೈ | ಸೆಪ್ಟೆಂಬರ್ - ಅಕ್ಟೋಬರ್. | 120 ರಿಂದ 150 ದಿನಗಳು (3–4 ತಿಂಗಳು) |
| 15 | ಬದನೆ | ಜುಲೈ-ಆಗಸ್ಟ | ಸೆಪ್ಟೆಂಬರ್ - ಅಕ್ಟೋಬರ್. | 111 ರಿಂದ 120 ದಿನಗಳು (3 - 4 ತಿಂಗಳು) |
| 16 | ಆಲೂಗಡ್ಡೆ | ಜೂನ್-ಜುಲೈ | ಸೆಪ್ಟೆಂಬರ್ - ಅಕ್ಟೋಬರ್ | 120 ದಿನಗಳಿಂದ 130 ದಿನಗಳು (4-4.5 ತಿಂಗಳು) |
| 17 | ಹರಿಶಿನ | ಮೇ ನಿಂದ ಜೂನ್ | ಫೆಬ್ರುವರಿ. | 7 ರಿಂದ 9 ತಿಂಗಳು |
| 18 | ಶುಂಠಿ | ಮೇ ನಿಂದ ಜೂನ್ | ಮಾರ್ಚ್ - ಏಪ್ರಿಲ್ | 8 ರಿಂದ 10 ತಿಂಗಳು. |
| 19. | ರಾಗಿ | ಜೂನ್-ಜುಲೈ | ಸೆಪ್ಟೆಂಬರ್-ಅಕ್ಟೋಬರ್ | 120 - 135 ದಿನಗಳು (4–5 ತಿಂಗಳು) |
| 20. | ಹುರುಳಿ ಕಾಳು | ಜೂನ್-ಜುಲೈ | ಸೆಪ್ಟೆಂಬರ್-ಅಕ್ಟೋಬರ್ | 110 - 125 ದಿನಗಳು (3.5 ರಿಂದ 4 ತಿಂಗಳು) |
| 21. | ಅಲಸಂದೆ | ಮೇ-ಜೂನ್ | ಜುಲೈ-ಆಗಸ್ಟ | 95 - 110 ದಿನಗಳು (3 - 3.5 ತಿಂಗಳು) |
| II. | **ಹಿಂಗಾರು** | | | |
| 22 | ಜೋಳ/ ಜೋಳ | ಸೆಪ್ಟೆಂಬರ್ ನಿಂದ ಅಕ್ಟೋಬರ್ ವರೆಗೆ | ಡಿಸೆಂಬರ್-ಜನವರಿ | 110 ದಿನಗಳಿಂದ 130 ದಿನಗಳು (3 ರಿಂದ 4 ತಿಂಗಳು) |
| 23 | ಗೋಧಿ | ಅಕ್ಟೋಬರ್ - ನವೆಂಬರ್ | ಫೆಬ್ರುವರಿ – ಮಾರ್ಚ್ | 130 ದಿನಗಳಿಂದ 150 ದಿನಗಳು (4.5 ರಿಂದ 5 ತಿಂಗಳು) |
| 24 | ಕಡಲೆ | ಅಕ್ಟೋಬರ್ - ನವೆಂಬರ್ | ಡಿಸೆಂಬರ್ – ಜನವರಿ | 85 ದಿನಗಳಿಂದ 130 ದಿನಗಳು (3 ರಿಂದ 4 ತಿಂಗಳು) |
| 25 | ಸೂರ್ಯಕಾಂತಿ | ಅಕ್ಟೋಬರ್ (ಮೊದಲ ವಾರ) | ಡಿಸೆಂಬರ್ - ಜನವರಿ | 80 ರಿಂದ 110 ದಿನಗಳು (3 ರಿಂದ 4 ತಿಂಗಳು) |
| 26 | ಕುಸುಬೆ | ಸೆಪ್ಟೆಂಬರ್-ಅಕ್ಟೋಬರ್ | ಜನವರಿ - ಫೆಬ್ರುವರಿ | 110 ರಿಂದ 120 ದಿನಗಳು (3 ತಿಂಗಳು) |
| 27 | ಈರುಳ್ಳಿ | ನವೆಂಬರ್-ಡಿಸೆಂಬರ್ | ಜನವರಿ - ಫೆಬ್ರುವರಿ | 110 ರಿಂದ 130 ದಿನಗಳು (3.5 ರಿಂದ 4 ತಿಂಗಳು) |
| 28 | ಮೆಕ್ಕೆಜೋಳ | ಅಕ್ಟೋಬರ್ - ನವೆಂಬರ್ | ಜನವರಿ - ಫೆಬ್ರುವರಿ | 80 ರಿಂದ 120 ದಿನಗಳು (3 ರಿಂದ 4 ತಿಂಗಳು) |
| 29 | ಎಳ್ಳು | ಅಕ್ಟೋಬರ್. | ಡಿಸೆಂಬರ್ - ಜನವರಿ | 80 ರಿಂದ 90 ದಿನಗಳು (3 ತಿಂಗಳುಗಳು) |
| 30 | ಆಲೂಗಡ್ಡೆ | ಅಕ್ಟೋಬರ್ - ನವೆಂಬರ್ | ಫೆಬ್ರುವರಿ | 90 ದಿನಗಳಿಂದ 100 ದಿನಗಳು (3 ರಿಂದ 3.50 ತಿಂಗಳುಗಳು) |
| 31 | ಎಲೆಕೋಸು | ಸೆಪ್ಟೆಂಬರ್-ಅಕ್ಟೋಬರ್ | ಡಿಸೆಂಬರ್ - ಜನವರಿ | 90 ರಿಂದ 120 ದಿನಗಳು (3-4 ತಿಂಗಳು) |
| 32 | ಕುಸುಬೆ | ಅಕ್ಟೋಬರ್ - ನವೆಂಬರ್ | ಜನವರಿ - ಫೆಬ್ರುವರಿ | 120 - 150 ದಿನಗಳು (4 - 5 ತಿಂಗಳು) |
| 33. | ಉದ್ದಿನ ಬೇಳೆ | ನವೆಂಬರ್-ಡಿಸೆಂಬರ್ | ಫೆಬ್ರುವರಿ-ಮಾರ್ಚ್ | 85 - 90 ದಿನಗಳು (2.5 ರಿಂದ 3 ತಿಂಗಳು) |
| 34. | ಹುರುಳಿ ಕಾಳು | ಸೆಪ್ಟೆಂಬರ್-ಅಕ್ಟೋಬರ್ | ಡಿಸೆಂಬರ್ - ಜನವರಿ | 115 ರಿಂದ 120 ದಿನಗಳು (3.5 ರಿಂದ 4 ತಿಂಗಳು) |
| 35. | ಹೆಸರು ಕಾಳು | ನವೆಂಬರ್-ಡಿಸೆಂಬರ್ | ಫೆಬ್ರುವರಿ - ಮಾರ್ಚ್ | 90 - 100 ದಿನಗಳು |
| 36. | ಭತ್ತ | ಅಕ್ಟೋಬರ್-ನವೆಂಬರ್ | ಜನವರಿ - ಫೆಬ್ರುವರಿ | 120 - 135 ದಿನಗಳು |

| | | | | |
|---|---|---|---|---|
| 37. | ರಾಗಿ | ಅಕ್ಟೋಬರ್-ನವೆಂಬರ್ | ಜನವರಿ - ಫೆಬ್ರುವರಿ | 125 ರಿಂದ 130 ದಿನಗಳು |
| 38. | ಟೊಮ್ಯಾಟೋ | ಅಕ್ಟೋಬರ್ - ನವೆಂಬರ್ | ಜನವರಿ-ಫೆಬ್ರುವರಿ | 100 - 110 ದಿನಗಳು |
| | **ಬೇಸಿಗೆ** | | | |
| 39 | ಮೆಕ್ಕೆಜೋಳ | ಜನವರಿ 15 ರಿಂದ ಫೆಬ್ರುವರಿ 15 | ಏಪ್ರಿಲ್ 15 ರಿಂದ ಮೇ 15 ರವರೆಗೆ | 80 ರಿಂದ 120 ದಿನಗಳು (3 ರಿಂದ 4 ತಿಂಗಳು) |
| 40 | ನೆಲಗಡಲೆ | ಜನವರಿ 16 ರಿಂದ ಫೆಬ್ರುವರಿ 15 | ಏಪ್ರಿಲ್-ಮೇ | 100 ರಿಂದ 120 ದಿನಗಳು (3-4 ತಿಂಗಳು |
| 41 | ಸಕ್ಕರೆ ಗೆಡ್ಡೆ | ಅಕ್ಟೋಬರ್ | ಡಿಸೆಂಬರ್ | 3 ತಿಂಗಳು |
| | | | | |
| 42 | ಸೂರ್ಯಕಾಂತಿ | ಫೆಬ್ರುವರಿ-ಮಾರ್ಚ್ | ಏಪ್ರಿಲ್-ಮೇ | 120 - 130 ದಿನಗಳು (3 - 4 ತಿಂಗಳು) |
| 43 | ಕಲ್ಲಂಗಡಿ | ಫೆಬ್ರುವರಿ-ಮಾರ್ಚ್ | ಏಪ್ರಿಲ್-ಮೇ | 80 - 90 ದಿನಗಳು (3 - 4 ತಿಂಗಳು) |
| 44 | ಸೌತೆಕಾಯಿ | ಫೆಬ್ರುವರಿ-ಮಾರ್ಚ್ | ಏಪ್ರಿಲ್-ಮೇ | 70 - 90 ದಿನಗಳು (2.5 - 3 ತಿಂಗಳು) |
| 45 | ಟೊಮ್ಯಾಟೋ | ಫೆಬ್ರುವರಿ-ಮಾರ್ಚ್ | ಮೇ - ಜೂನ್ | 140 - 145 ದಿನಗಳು |
| | **ಬಹುವಾರ್ಷಿಕ ಬೆಳೆಗಳು** | | | |
| 46 | ಕಬ್ಬು **(ಅಡ್ಸಾಲಿ)** | ಜುಲೈ 15 ರಿಂದ ಆಗಸ್ಟ 15 | ಅಕ್ಟೋಬರ್ - ಡಿಸೆಂಬರ್ (ಮುಂದಿನ ವರ್ಷ) | 15 ರಿಂದ 18 ತಿಂಗಳು |
| 47 | ಕಬ್ಬು **(ಋತುಮಾನ ಪೂರ್ವ)** | ಅಕ್ಟೋಬರ್ 15 ರಿಂದ ನವೆಂಬರ್ 30 ರವರೆಗೆ | ಅಕ್ಟೋಬರ್-ಜನವರಿ (ಮುಂದಿನ ವರ್ಷ) | 15 ರಿಂದ 18 ತಿಂಗಳು |
| 48 | ಕಬ್ಬು **(ಅಡ್ಸಾಲಿ)** | ಜುಲೈ-ಆಗಸ್ಟ್ | ಅಕ್ಟೋಬರ್-ಡಿಸೆಂಬರ್ (ಮುಂದಿನ ವರ್ಷ) | 14 ರಿಂದ 18 ತಿಂಗಳು |
| 49 | ಕಬ್ಬು **(ರಾಟೂನ್)** | ಅಕ್ಟೋಬರ್-ಫೆಬ್ರುವರಿ. | ಡಿಸೆಂಬರ್-ಏಪ್ರಿಲ್ (ಮುಂದಿನ ವರ್ಷ) | 13 ರಿಂದ 15 ತಿಂಗಳು |
| | **ತೋಟಗಾರಿಕೆ ಬೆಳೆಗಳು** | | | |
| 50 | ಬಾಳೆಹಣ್ಣು (ದ್ವೈವಾರ್ಷಿಕ) | ಜೂನ್-ಜುಲೈ | ಮಾರ್ಚ್ (ಮುಂದಿನ ವರ್ಷ) | 21 ತಿಂಗಳು |

**ಸೂಚನೆ: ಮರುಪಾವತಿ ಕೊನೆಯ ದಿನಾಂಕ: ಅಲ್ಪಾವಧಿ ಬೆಳೆಗಳು 12 ತಿಂಗಳು ಮತ್ತು ದೀರ್ಘಾವಧಿ ಬೆಳೆಗಳು 18 ತಿಂಗಳು, ಇದರಲ್ಲಿ ಕೊಯ್ಲಿನ ನಂತರದ ಮತ್ತು ಮಾರಾಟದ ಅವಧಿ ಸೇರಿವೆ.**

**ಕೃಷಿ ಅಲ್ಪಾವಧಿ ಬೆಳೆ ಸಾಲಗಳು ಮತ್ತು ಅವಧಿ ಸಾಲಗಳಿಗೆ ಅನ್ವಯವಾಗುವ 'ಐಆರ್‌ಎಸಿ' ಮಾನದಂಡಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ:-**

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

## ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ
## ಸಂಚಾಲಕರು: ಕೆನರಾ ಬ್ಯಾಂಕ್

| **ವಿವರಗಳು** | **ಅಲ್ಪಾವಧಿ ಬೆಳೆಗಳು** | | **ತೋಟಗಾರಿಕೆ ಬೆಳೆಗಳು** | **ದೀರ್ಘಾವಧಿ ಬೆಳೆಗಳು** | |
|---|---|---|---|---|---|
| | **ಖಾರಿಫ್ ಋತು** | **ರಬಿ ಋತುಮಾನ** | | **ಬಹುವಾರ್ಷಿಕ ಬೆಳೆ (ಕಬ್ಬು) ಅಡ್ಸಾಲಿ** | **ದ್ವೈವಾರ್ಷಿಕ ಬೆಳೆ (ಬಾಳೆ)** |
| **ಹಣಕಾಸು ವರ್ಷ** | 2020 | 2020 | 2020 | 2020 | 2020 |
| **ಸಾಲದ ದಿನಾಂಕ** | **01.06.2020** | **01.10.2020** | **01.07.2020** | **01.07.2020** | **01.06.2020** |
| ಋತು ಪ್ರಾರಂಭ | ಜೂನ್, 2020 | ಅಕ್ಟೋಬರ್,2020 | ಜುಲೈ, 2020 | ಜುಲೈ, 2020 | ಜೂನ್, 2020 |
| ಕೊಯ್ಲು ಸಮಯ | ಅಕ್ಟೋಬರ್-ನವೆಂಬರ್ 2020 | ಮಾರ್ಚ್-2021 | ಏಪ್ರಿಲ್-ಮೇ 2021 | ಡಿಸೆಂಬರ್-2021 | ಮಾರ್ಚ್-2022 |
| **ಮರುಪಾವತಿ ಕೊನೆಯ ದಿನಾಂಕ** | 31.05.2021 | 30.09.2021 | 30.06.2021 | 31.12.2021 | 28.02.2022 |
| **ಸಾಲದ ಕಂತು ಪಾವತಿಗೆ ಗಡುವಿನ ನಂತರ ಮೊದಲ ಬೆಳೆ ಋತು** | | | | | |
| ಋತು ಪ್ರಾರಂಭ | ಜೂನ್, 2021 | ಅಕ್ಟೋಬರ್, 2021 | ಜುಲೈ, 2021 | ಜನವರಿ, 2022 | ಮಾರ್ಚ್, 2022 |
| ಕೊಯ್ಲು ಸಮಯ | ಅಕ್ಟೋಬರ್-ನವೆಂಬರ್ 2021 | ಮಾರ್ಚ್-2022 | ಮೇ-ಜೂನ್ 2022 | ಜೂನ್-2023 | ನವೆಂಬರ್ -2023 |
| **ಸಾಲದ ಕಂತು ಪಾವತಿಗೆ ಗಡುವಿನ ನಂತರ ಎರಡನೇ ಬೆಳೆ ಋತು** | | | | | |
| ಋತು ಪ್ರಾರಂಭ | ಜೂನ್, 2022 | ಅಕ್ಟೋಬರ್, 2022 | ಜುಲೈ, 2022 | NA | NA |
| ಕೊಯ್ಲು ಸಮಯ | ಅಕ್ಟೋಬರ್ -ನವೆಂಬರ್ 2022 | ಮಾರ್ಚ್ 2023 | ಮೇ-ಜೂನ್ 2023 | NA | NA |
| **ಎನ್‌ಪಿಎ ದಿನಾಂಕ** | 31.05.2023 | 30.09.2023 | 30.06.2023 | 30.06.2023 | 30.11.2023 |
| ಸಾಲ ಪಡೆದ ದಿನಾಂಕದಿಂದ ತಿಂಗಳುಗಳ ಸಂಖ್ಯೆ | 36 | 36 | 36 | 36 | 42 |
| ಮೊದಲ ಕಂತು ಮರುಪಾವತಿಯ ಗಡುವಿನಿಂದ ತಿಂಗಳುಗಳ ಸಂಖ್ಯೆ | 24 | 24 | 24 | 18 | 21 |

---

**'ಐಆರ್‌ಎಸಿ' ನಿಯಮಗಳ ಪ್ರಕಾರ,**

a) ಎರಡು ಬೆಳೆ ಋತುಗಳ ಅವಧಿಗೆ ಅಂದರೆ ಮರುಪಾವತಿ ದಿನಾಂಕದಿಂದ 24 ತಿಂಗಳು ಅಥವಾ ಸಾಲ ಪಡೆದ ದಿನಾಂಕದಿಂದ 36 ತಿಂಗಳುಗಳವರೆಗೆ ಅಸಲು ಅಥವಾ ಬಡ್ಡಿಯ ಕಂತು ಬಾಕಿ ಉಳಿದಿದ್ದರೆ ಅಲ್ಪಾವಧಿಯ ಬೆಳೆಗಳನ್ನು 'ಎನ್‌ಪಿಎ' ಎಂದು ಪರಿಗಣಿಸಲಾಗುತ್ತದೆ.

b) ಒಂದು ಬೆಳೆ ಋತುವಿನ ಅವಧಿಗೆ, ಅಂದರೆ ಮರುಪಾವತಿ ದಿನಾಂಕದಿಂದ 18 ತಿಂಗಳು ಅಥವಾ ಸಾಲ ಪಡೆದ ದಿನಾಂಕದಿಂದ 36 ತಿಂಗಳುಗಳವರೆಗೆ ಅಸಲು ಅಥವಾ ಬಡ್ಡಿಯ ಕಂತು ಬಾಕಿಯಿದ್ದರೆ ದೀರ್ಘಾವಧಿಯ ಬೆಳೆಗಳನ್ನು 'ಎನ್‌ಪಿಎ' ಎಂದು ಪರಿಗಣಿಸಲಾಗುತ್ತದೆ.

**ರೈತರು ಬೆಳೆದ ಬೆಳೆಗಳ ಅವಧಿಯನ್ನು ಅವಲಂಬಿಸಿ, ಅವರು ಪಡೆದ ಕೃಷಿ ಅವಧಿ ಸಾಲಗಳಿಗೂ ಮೇಲಿನ 'ಎನ್‌ಪಿಎ' ಮಾನದಂಡಗಳನ್ನು ಅನ್ವಯಿಸಲಾಗುತ್ತದೆ.**

ಅವಧಿಯು **'**ಪಿಎಂಎಫ್‌ಬಿವೈ**'** ಮಾರ್ಗಸೂಚಿಗಳಿಗೆ ಅನುಗುಣವಾಗಿರಬೇಕು ಎಂದು ಚರ್ಚೆಯ ಸಮಯದಲ್ಲಿ ಅಧ್ಯಕ್ಷರು ತಿಳಿಸಿರುತ್ತಾರೆ**.**

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**ಟೇಬಲ್ ಕಾರ್ಯಸೂಚಿ- 2:**

**ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ 'ಜೆಎಲ್‌ಜಿ' ಯೋಜನೆ:**

ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 'ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ' 28.07.2022 ರಂದು ಪ್ರಾರಂಭವಾಯಿತು. ಈ ಯೋಜನೆಯು ಭಾರತ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರಚಿಸಿದ 'ಸ್ವಾಮಿ ವಿವೇಕಾನಂದ ಜೆಎಲ್‌ಜಿ ಗುಂಪು'ಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.

ಯೋಜನೆಯ ಮುಂದುವರಿಕೆ ಕುರಿತ ಇತ್ತೀಚಿನ ಸರ್ಕಾರಿ ಆದೇಶವನ್ನು ಒದಗಿಸಬೇಕು**.** ಇದರಿಂದ ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳ ಪ್ರಕಾರ 'ಜೆಎಲ್‌ಜಿ ಗುಂಪು'ಗಳಿಗೆ ಬ್ಯಾಂಕುಗಳು ಹಣಕಾಸು ಒದಗಿಸಬಹುದು ಎಂದು ಸಂಚಾಲಕರು ಸಂಬಂಧಪಟ್ಟ ಇಲಾಖೆಗೆ ವಿನಂತಿಸಿದರು**.**

(**ಕ್ರಮ**: **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**, **ಕರ್ನಾಟಕದ ಸರ್ಕಾರ**)

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

**ಎಸ್‌ಎಲ್‌ಬಿಸಿ - ಕರ್ನಾಟಕ**

**ಭಾಗವಹಿಸಿದವರ ವಿವರ**
**26.11.2024ರಂದು ನಡೆದ 167ನೇ 'ಎಸ್‌ಎಲ್‌ಬಿಸಿ' ಸಭೆ**

| **ಕ್ರ.ಸಂ.** | **ಶ್ರೀಯುತರ ಹೆಸರು** | **ಹುದ್ದೆ** | **ಸಂಸ್ಥೆ** |
|---|---|---|---|
| 1 | ಶ್ರೀಮತಿ ಉಮಾ ಮಹಾದೇವನ್ | ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು | ಕರ್ನಾಟಕ ಸರ್ಕಾರ |
| 2 | ಶ್ರೀಮತಿ ಸೋನಾಲಿ ಸೇನ್ ಗುಪ್ತಾ | ಪ್ರಾದೇಶಿಕ ನಿರ್ದೇಶಕರು | ಆರ್‌ಬಿಐ |
| 3 | ಶ್ರೀ ಹರ್ದೀಪ್ ಸಿಂಗ್ ಅಹ್ಲುವಾಲಿಯಾ | ಕಾರ್ಯನಿರ್ವಾಹಕ ನಿರ್ದೇಶಕರು | ಕೆನರಾ ಬ್ಯಾಂಕ್ |
| 4 | ಡಾ.ವಿಶಾಲ್ ಆರ್. | ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿಗಳು (ಹಣಕಾಸು ಸುಧಾರಣೆ) | ಕರ್ನಾಟಕ ಸರ್ಕಾರ |
| 5 | ಪಿ ಐ ಶ್ರೀವಿದ್ಯಾ | ಎಂಡಿ | ಎನ್‌ಯುಎಲ್‌ಎಂ |
| 6 | ದಿಲೀಷ್ ಶಶಿ | ಸಿಇಒ | ಇ-ಆಡಳಿತ |
| 5 | ಶ್ರೀ. ಕೆವಿಎಸ್‌ಎಸ್‌ಎಲ್‌ವಿ ಪ್ರಸಾದ ರಾವ್ | ಚೀಫ್ ಜನರಲ್ ಮ್ಯಾನೇಜರ್ | ನಬಾರ್ಡ್ |
| 6 | ಶ್ರೀ ಕೆ ಜೆ ಶ್ರೀಕಾಂತ್ | ಸಂಚಾಲಕರು | ಎಸ್‌ಎಲ್‌ಬಿಸಿ-ಕರ್ನಾಟಕ |
| 7 | ಶ್ರೀ ಭಾಸ್ಕರ ಚಕ್ರವರ್ತಿ ಎಂ | ಉಪ ಸಂಚಾಲಕರು | ಎಸ್‌ಎಲ್‌ಬಿಸಿ-ಕರ್ನಾಟಕ |
| 8 | ಶ್ರೀ ವಿ ಹರಿ ಪ್ರಸಾದ್ | ಉಪ ಪ್ರಧಾನ ವ್ಯವಸ್ಥಾಪಕರು | ಆರ್‌ಬಿಐ |
| 9 | ಶ್ರೀಮತಿ, ಎಸ್ ಬೃಂದಾ | ಪ್ರಧಾನ ವ್ಯವಸ್ಥಾಪಕರು | ನಬಾರ್ಡ್ |
| 10 | ಶ್ರೀ. ಸಂಜಯ್ ಕುಮಾರ್ | ಉಪ ಪ್ರಧಾನ ವ್ಯವಸ್ಥಾಪಕರು | ನಬಾರ್ಡ್ |
| 11 | ಶ್ರೀ ಬಿ ಪಾರ್ಶ್ವನಾಥ್ | ಡಿಜಿಎಂ ಎಸ್‌ಎಲ್‌ಬಿಸಿ | ಕೆನರಾ ಬ್ಯಾಂಕ್ |
| 14 | ಶಿಲ್ಪಾ ರಾವ್ | ಮುಖ್ಯಸ್ಥರು-ಸಹಯೋಗ | ಆರ್‌ಬಿಐಎಚ್ |
| **ಸಂಚಾಲಕರು - ಕೆನರಾ ಬ್ಯಾಂಕ್** | | | |
| 15 | ಪ್ರದೀಪ್ ಕುಮಾರ್ ಎಚ್ | ವಿಭಾಗೀಯ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |

| | | | |
|---|---|---|---|
| 16 | ಅಮೋಲ್ ಆರ್ ಅಕೋಲ್ಕರ್ | ವ್ಯವಸ್ಥಾಪಕರು– ಎಸ್‌ಎಲ್‌ಬಿಸಿ | ಕೆನರಾ ಬ್ಯಾಂಕ್ |
| 17 | ವಿದ್ಯಾ | ವ್ಯವಸ್ಥಾಪಕರು – ಎಸ್‌ಎಲ್‌ಬಿಸಿ | ಕೆನರಾ ಬ್ಯಾಂಕ್ |
| 18 | ಚೇತನ್ ಕೆ.ಎಸ್. | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 19 | ವಿಕಾಸ್ ಠಾಕೂರ್ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 20 | ಹರ್ಷ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 21 | ಅಖಿಲ್ ಆರ್ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| **ಸದಸ್ಯ ಬ್ಯಾಂಕುಗಳು ಮತ್ತು ರಾಜ್ಯ ಸರ್ಕಾರಿ ಇಲಾಖೆಗಳು** | | | |
| 22 | ಮಹೇಶ್ ಎಂ ಪೈ | ಪ್ರಧಾನ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 23 | ಪ್ರಫುಲ್ ಕುಮಾರ್ ಜೀನಾ | ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 24 | ವಿಕಾಸ್ ವಸಿಷ್ಠ | ಉಪ ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 25 | ಸುಮನಾ ದಾಸ್ ಗುಪ್ತಾ | ಉಪ ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 26 | ಬುಬುಲ್ ಬಾರ್ಡೊಲೊಯ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಆರ್‌ಬಿಐ |
| 27 | ಸಿ ವಿ ಸುಧೀರ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ |
| 28 | ರವಿ ಪಾಠಕ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಬ್ಯಾಂಕ್ ಆಫ್ ಬರೋಡಾ |
| 29 | ರಾಘವೇಂದ್ರ ರಾವ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 30 | ಸವಿತಾ ಆರ್ | ವಿಭಾಗೀಯ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 31 | ಎನ್ ಪ್ರೇಮಾನಂದ್ | ಪ್ರಾದೇಶಿಕ ಮುಖ್ಯಸ್ಥರು | ಎಚ್ ಡಿಎಫ್ ಸಿ ಬ್ಯಾಂಕ್ |
| 32 | ನಾಗರಾಜ್ ಎಸ್.ಪಿ. | ಉಪ ಪ್ರಧಾನ ವ್ಯವಸ್ಥಾಪಕರು | ಐಸಿಐಸಿಐ ಬ್ಯಾಂಕ್ |
| 33 | ನಾಗ ಸುಧೀರ್ ರಾಜಾ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಕರ್ಣಾಟಕ ಬ್ಯಾಂಕ್ |

| | | | |
|---|---|---|---|
| 34 | ಸುನಿಲ್ ಕುರ್ತಕೋಟಿ | ಹಣಕಾಸು ಸಲಹೆಗಾರರು | ಕರ್ನಾಟಕದ ಸರ್ಕಾರ |
| 35 | ರಾಘವಿ ನಾಯಕ್ | ಯೋಜನಾಧಿಕಾರಿ | ಕರ್ನಾಟಕದ ಸರ್ಕಾರ |
| 36 | ವೆಂಕಟ ಅನಿಲ್ | ಪ್ರಾದೇಶಿಕ ಮುಖ್ಯಸ್ಥರು, ಉಪಾಧ್ಯಕ್ಷರು | ಎಚ್‌ಡಿಎಫ್‌ಸಿ ಬ್ಯಾಂಕ್ |
| 37 | ಅನೂಪ್ ಕುಮಾರ್ ಕೆ | ಮುಖ್ಯ ವ್ಯವಸ್ಥಾಪಕರು | ಬ್ಯಾಂಕ್ ಆಫ್ ಬರೋಡಾ |
| 38 | ರಾಜೇಶ್ ಬಿ | ವ್ಯವಸ್ಥಾಪಕ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 39 | ರಮೇಶ್ ಬಾಬು ಕೆ ವಿ | ಎವಿಪಿ | ಡಿಸಿಬಿ ಬ್ಯಾಂಕ್ |
| 40 | ಎನ್ ಪೃಥ್ವಿ ಕಾಂತ್ ರೆಡ್ಡಿ | ಎಎಂ | ನಬಾರ್ಡ್ |
| 41 | ವಿಜಯ್ ಕೆ. | ಪ್ರಾದೇಶಿಕ ಮುಖ್ಯಸ್ಥರು | ಇಂಡಸ್‌ಇಂಡ್ ಬ್ಯಾಂಕ್ |
| 42 | ಎಲ್ಲಾ ಸದಸ್ಯ ಬ್ಯಾಂಕುಗಳು, ಎಲ್ಲಾ ರಾಜ್ಯ ಸರ್ಕಾರಿ ಇಲಾಖೆಗಳು ಮತ್ತು ಎಲ್‌ಡಿಎಂಗಳು | ವಿಡಿಯೊ ಕಾನ್ಫರೆನ್ಸ್ ಮೂಲಕ | |

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

# ಸಭೆಯ ಇಣುಕು ನೋಟಗಳು






**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**




***************